ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 119 RNI Number : KNKAN/25/A2770 08-05-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :119 ರಾಯಚೂರು 08-05-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563

ತಮಿಳುನಾಡಿನಲ್ಲಿ ಸರ್ಕಾರ ರಚನೆ ಟೆನ್ಷನ್: 24 ತಾಸಲ್ಲಿ 3 ಬಾರಿ ರಾಜ್ಯಪಾಲರ ಭೇಟಿಯಾದ ವಿಜಯ್



ಚೆನ್ನೈ(ತಮಿಳುನಾಡು): ರಾಜ್ಯ ರಾಜಕೀಯದ ವಿದ್ಯಮಾನಗಳು ಕ್ಷಣಕ್ಷಣಕ್ಕೂ ಕುತೂಹಲ ಮೂಡಿಸುತ್ತಿವೆ. ವಿಧಾನಸಭೆ ಚುನಾವಣೆಯಲ್ಲಿ ಮೂಡಿದ ಅತಂತ್ರ ಸ್ಥಿತಿ, ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ನಟ ವಿಜಯ್ ಅವರ ಟಿವಿಕೆ ಪಕ್ಷವನ್ನೂ ಅತಂತ್ರವನ್ನಾಗಿ ಮಾಡಿದೆ.

ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರನ್ನು ಟಿವಿಕೆ ಪಕ್ಷದ ಸಂಸ್ಥಾಪಕ ಮುಖ್ಯಸ್ಥ ವಿಜಯ್ ಅವರು 24 ತಾಸಿನಲ್ಲಿ ಮೂರು ಬಾರಿ ಭೇಟಿಯಾಗಿ ಸರ್ಕಾರ ರಚನೆಯ ಕಸರತ್ತು ನಡೆಸಿದ್ದಾರೆ. ಆದರೆ, ಬಹುಮತದ ಸಂಖ್ಯೆಯನ್ನು ದೃಢೀಕರಿಸಲು ರಾಜ್ಯಪಾಲರು ನಟ/ ರಾಜಕಾರಣಿಗೆ ಸೂಚಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಮೂರು ಬಾರಿಯ ಭೇಟಿ ಮತ್ತು ಮಾತುಕತೆಯಲ್ಲಿ ರಾಜ್ಯಪಾಲ ವಿಜಯ್ ಅರ್ಲೇಕರ್ ಅವರು ಟಿವಿಕೆ ಸಂಸ್ಥಾಪಕರನ್ನು ಸರ್ಕಾರ ರಚಿಸಲು ಅನುಮತಿ ನೀಡಿದ್ದಾರೋ ಅಥವಾ ಇಲ್ಲವೇ ಎಂಬುದರ ಕುರಿತು ಅಧಿಕಾರಿಗಳು ಅಥವಾ ಟಿವಿಕೆಯಿಂದ ತಕ್ಷಣದ ಮಾಹಿತಿ ಬಂದಿಲ್ಲ.

ಇಂದು ಬೆಳಗ್ಗೆ ಲೋಕ ಭವನಕ್ಕೆ ಎರಡನೇ ಬಾರಿ ಭೇಟಿ ನೀಡಿದ ಟಿವಿಕೆ ಮುಖ್ಯಸ್ಥ ವಿಜಯ್ ಸುಮಾರು 40 ನಿಮಿಷಗಳ ಕಾಲ ರಾಜ್ಯಪಾಲರ ಭವನದೊಳಗೆ ಇದ್ದರು. ನಂತರ ಅವರು ಅಲ್ಲಿಂದ ಹೊರನಡೆದರು. ಬಳಿಕ ಮತ್ತೆ ಅವರು ರಾಜಭವನಕ್ಕೆ ಆಗಮಿಸಿ, ವಾಪಸ್ ತೆರಳಿದರು.

ಸಿಗುತ್ತಿಲ್ಲ 'ಮ್ಯಾಜಿಕ್' ನಂಬರ್: 234 ಸದಸ್ಯರ ವಿಧಾನಸಭೆಯಲ್ಲಿ ಟಿವಿಕೆ 108 ಸ್ಥಾನಗಳನ್ನು ಗೆದ್ದು ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಐದು ಶಾಸಕರನ್ನು ಹೊಂದಿರುವ ಕಾಂಗ್ರೆಸ್ ಪಕ್ಷವು ಈಗಾಗಲೇ ಟಿವಿಕೆಗೆ ಬೆಂಬಲ ಘೋಷಿಸಿದೆ. ಇದರಿಂದ, ಸದ್ಯ ಟಿವಿಕೆ ಬಲವು 113 ಆಗಿದೆ. ಬಹುಮತಕ್ಕೆ 118 ಸ್ಥಾನ ಬೇಕಿದೆ.

ದ್ರಾವಿಡ ಪಕ್ಷಗಳಾದ ಡಿಎಂಕೆ ಹಾಗೂ ಎಡಿಎಂಕೆ ನಟ ವಿಜಯ್‌ಗೆ ಬೆಂಬಲ ನೀಡುವುದಿಲ್ಲ ಎಂದು ಘಂಟಾಘೋಷವಾಗಿ ಹೇಳಿವೆ. ಒಂದು ಹೆಜ್ಜೆ ಮುಂದೆ ಹೋಗಿರುವ ಎಡಿಎಂಕೆ ತನ್ನೆಲ್ಲಾ ಶಾಸಕರನ್ನು ಕೇಂದ್ರಾಡಳಿತ ಪ್ರದೇಶ ಪುದುಚೇರಿಗೆ ಸ್ಥಳಾಂತರಿಸಿ ರೆಸಾರ್ಟ್ ರಾಜಕಾರಣ ಆರಂಭಿಸಿದೆ.

ಇತ್ತ ಡಿಎಂಕೆ ಕೂಡ, ಯಾವುದೇ ಕಾರಣಕ್ಕೂ ನಮ್ಮ ಪಕ್ಷವು ವಿಜಯ್‌ಗೆ ಬೆಂಬಲ ನೀಡುವುದಿಲ್ಲ. 6 ತಿಂಗಳು ಕಾದು ನೋಡಲಾಗುವುದು. ಟಿವಿಕೆ ಸರ್ಕಾರ ರಚಿಸಲು ನಾವು ಅಡ್ಡಿಯಾಗುವುದಿಲ್ಲ ಎಂದು ಮಾಜಿ ಸಿಎಂ ಎಂ.ಕೆ. ಸ್ಟಾಲಿನ್ ತಿಳಿಸಿದ್ದಾರೆ.

ಪ್ರಮಾಣವಚನ ಮುಂದೂಡಿಕೆ: ಬಹುಮತ ಪಡೆಯಲು ವಿಜಯ್ ನಡೆಸುತ್ತಿರುವ ಕಸರತ್ತು ಫಲ ನೀಡುವ ಲಕ್ಷಣ ಕಾಣುತ್ತಿಲ್ಲ. ಹೀಗಾಗಿ, ಇಂದು ನಡೆಯಬೇಕಿದ್ದ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ಮುಂದೂಡಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ತಮ್ಮ ನೆಚ್ಚಿನ ನಾಯಕ ರಾಜ್ಯದ ಸಿಎಂ ಆಗಿ ಪ್ರಮಾಣ ಸ್ವೀಕರಿಸುವುದನ್ನು ಕಣ್ತುಂಬಿಕೊಳ್ಳಲು ಬಂದಿದ್ದ ಅಭಿಮಾನಿಗಳಿಗೆ ನಿರಾಸೆಯಾಗಿದ್ದು ಚೆನ್ನೈನ ನೆಹರೂ ಕ್ರೀಡಾಂಗಣದಲ್ಲಿ ಕಣ್ಣೀರು ಹಾಕುತ್ತಿದ್ದಾರೆ.

ಈ ಬಗ್ಗೆ ಮಾಧ್ಯಮಗಳ ಜೊತೆ ಮಾತನಾಡಿರುವ ಟಿವಿಕೆ ನಾಯಕ ವಿ.ಎಸ್.ಬಾಬು, ಬಹುಮತ ಮತ್ತು ಪ್ರಮಾಣ ಸ್ವೀಕಾರ ಕಾರ್ಯಕ್ರಮದ ಬಗ್ಗೆ ಶೀಘ್ರದಲ್ಲೇ ನಿರ್ಣಯವಾಗಲಿದೆ. ಮುಂದೇನಾಗುತ್ತದೆ ಎಂಬುದನ್ನು ಕಾದು ನೋಡಿ ಎಂದು ಹೇಳಿದ್ದಾರೆ.

ಮಾಧ್ಯಮಗಳಲ್ಲಿ ಭಿತ್ತರವಾಗುತ್ತರುವಂತೆ, ಡಿಎಂಕೆಯ ಮಿತ್ರಪಕ್ಷಗಳು ವಿಜಯ್‌ಗೆ ಬೆಂಬಲ ನೀಡಿವೆ ಎಂದು ವರದಿಯಾಗುತ್ತಿದೆ. ಸಿಪಿಐ, ಪಿಎಂಕೆ, ಇತರ ಸಣ್ಣಪುಟ್ಟ ಪಕ್ಷಗಳು ಸರ್ಕಾರಕ್ಕೆ ಬೆಂಬಲ ನೀಡುವುದಾಗಿ ಘೋಷಿಸಿವೆ. ಹೀಗಾಗಿ ವಿಜಯ್‌ಗೆ ಸರ್ಕಾರ ರಚಿಸಲು ರಾಜ್ಯಪಾಲರು ಅವಕಾಶ ನೀಡಬೇಕು ಎಂದು ಕೋರಿದ್ದಾಗಿ ತಿಳಿದುಬಂದಿದೆ.

ಕುಡಿಯುವ ನೀರಿನ ಟ್ಯಾಂಕ್ ಕಾಮಗಾರಿ ಕಳಪೆ ದುರಸ್ಥಿ ಕೈಗೊಳ್ಳದಿದ್ದಲ್ಲಿ ಹೋರಾಟ ಎಚ್ಚರಿಕೆ

ರಾಯಚೂರು,ಮೇ.7-ನಗರದ ವಾರ್ಡ್ ನಂ.19 ರಲ್ಲಿ ನಿರ್ಮಿಸಲಾದ ಬೃಹತ್ ಗಾತ್ರದ ನೀರಿನ ಟ್ಯಾಂಕ್ ಕಾಮಗಾರಿ ಕಳಪೆ ಮಟ್ಟದಿಂದ ಕೂಡಿದ್ದು, ಇದರಿಂದ ಪೈಪ್ ಲೈನ್



ಹೊಡೆದು ನೀರು ಸೋರಿಕೆಯಾಗುತ್ತಿದೆ, ಕೂಡಲೇ ಇದನ್ನು ದುರಸ್ಥಿ ಕಾಮಗಾರಿ ಕೈಗೊಂಡು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಇಲ್ಲದಿದ್ದರೆ ಹೋರಾಟ ನಡೆಸಲಾಗುವುದು ಎಂದು ಸಾಮಾಜಿಕ ಕಾರ್ಯಕರ್ತ ಸಣ್ಣ ಬಾಬು ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಬೇಸಿಗೆ ಹಿನ್ನಲೆ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ.ಈ ಟ್ಯಾಂಕ್ ಸಂಪರ್ಕ ಹೊಂದಿರುವ ಪೈಪ್ ಲೈನ್ ಹೊಡೆದು ಕುಡಿಯುವ ನೀರು ಪೋಲು ಆಗುತ್ತಿರುವ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಇದುವರೆಗೂ ಯಾವುದೆ ದುರಸ್ಥಿ ಕಾಮಗಾರಿ ಕೈಗೊಂಡಿಲ್ಲ ಎಂದರು. ಅಧಿಕಾರಿಗಳ ಬೇಜವಾಬ್ದಾರಿಯಿಂದ ವಾರ್ಡ್ ನಂ.19,20 ನಿವಾಸಿಗಳು ಕುಡಿಯುವ ನೀರಿಗಾಗಿ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಸಾರ್ವಜನಿಕರಿಗೆ ಅನುಕೂಲ

ಮೂರನೇಯ ಪುಟಕ್ಕೆ

56 ಸಾವಿರ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಪ್ರತಿಭಟನೆ

ರಾಯಚೂರು,ಮೇ.7- ರಾಜ್ಯ ಸರಕಾರ ತಕ್ಷಣವೇ 56,432 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ ಹಾಗೂ ಕೆ.ಪಿ.ಎಸ್.ಸಿ. ಸ್ವಚ್ಛಗೊಳಿಸಲು ಪಿ.ಸಿ ಹೋಟಾ ಸಮಿತಿ ವರದಿ ಜಾರಿಗೊಳಿಸಬೇಕು ಎಂದು ಉದ್ಯೋಗಕಾಂಕ್ಷಿಗಳ ಹೋರಾಟ ಸಮಿತಿ ಪ್ರತಿಭಟನೆ ನಡೆಸಿದರು.



ನಗರದ ಇಂದು ರಾಯಚೂರಿನ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಎಡಿಸಿ ಜಗದೀಶ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸ'ಲ್ಲಿಸ'ಲಾಯಿತ'ು.

ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯಿಂದ ರಾಜ್ಯದಾದ್ಯಂತ ನಿರಂತರವಾಗಿ ರಾಜ್ಯ ಹಾಗೂ ಕೇಂದ್ರದಲ್ಲಿ ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಕಾಯಂ ಹಾಗೂ ಪಾರದರ್ಶಕ ನೇಮಕಾತಿಗಾಗಿ ಆಗ್ರಹಿಸಿ ಹೋರಾಟಗಳನ್ನು ಬೆಳೆಸುತ್ತಾ ಬಂದಿದೆ. ಎಲ್ಲಾ ಹೋರಾಟಗಳ ಪ್ರತಿಫಲವಾಗಿ ರಾಜ್ಯಸರ್ಕಾರವು ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ 56,432 ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿತ್ತು. ನಂತರವೂ ವಿವಿಧ ಇಲಾಖೆಗಳ ಸಚಿವರು ಅತೀ ಶೀಘ್ರದಲ್ಲಿ ನೇಮಕಾತಿ ಮಾಡುತ್ತೇವೆ ಎಂದು ದಿನಕ್ಕೊಂದು ಹೇಳಿಕೆಗಳನ್ನು ನೀಡುತ್ತಿರುವುದು ಉದ'್ಯೋಗಾಕಾಂಕ್ಷಿಗ'ಳಿಗೆ ಭ್ರಮನಿರಸನ ಉಂಟುಮಾಡಿದೆ. ಈ ಘೋಷಣೆ ಮಾಡಿ ಐದು ತಿಂಗಳುಗಳು ಕಳೆದಿದ್ದರೂ ಇದುವರೆಗೂ ಯಾವುದೇ ನೇಮಕಾತಿಗಳಿಗೆ ಅಧಿಸೂಚನೆಗಳನ್ನು ಹೊರಡಿಸಿಲ್ಲ. ಆದ್ದರಿಂದ ಉದ್ಯೋಗಾಕಾಂಕ್ಷಿಗಳು ಸರ್ಕಾರದ ಘೋಷಣೆಗಳನ್ನು ನಂಬಲು ಸಾಧ್ಯವಾಗದೆ, ವಿಶ್ವಾಸ ಕಳೆದುಕೊಂಡು ಮತ್ತೆ ಹೋರಾಡಲು ಬೀದಿಗಿಳಿದಿದ್ದಾರೆ.

ಈ ಮಧ್ಯೆ ಕೆ.ಪಿ.ಎಸ್.ಸಿ. ನಡೆಸಿದ ಕೆಎಎಸ್ ಪರೀಕ್ಷೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವ ಬಗ್ಗೆಯೂ ವರದಿಗಳು ಬಂದಿದ್ದು ಇದರ ಬಗ್ಗೆ ಸಮಗ್ರ ತ'ನಿಖೆಯಾಗ'ಬೇಕೆಂದ'ು ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯು ಆಗ್ರಹಿಸುತ್ತಾ ಬಂದಿದೆ. ಈ ಹಿಂದೆ ಕೂಡ ಕೆ.ಪಿ.ಎಸ್.ಸಿ. ನಡೆಸಿದ ಹಲವಾರು ನೇಮಕಾತಿ ಪ್ರಕ್ರಿಯೆಗಳಲ್ಲಿ ಭ್ರಷ್ಟಾಚಾರಗಳು ನಡೆದಿವೆ. ಆದ್ದರಿಂದ ಈ ಕೂಡಲೇ ಕೆ.ಪಿ.ಎಸ್.ಸಿ.ಯನ'್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ ಮುಂದಿನ ಎಲ್ಲಾ ನೇಮಕಾತಿಗಳು ಪಾರದರ್ಶಕವಾಗಿ ನಡೆಯುವಂತೆ ಖಾತ್ರಿಪಡಿಸಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿದೆ. ರಾಜ್ಯ ಸರ್ಕಾರ ತೀರ್ಮಾನಿಸಿದಂತೆ 56,432 ಹುದ್ದೆಗಳಿಗೆ ಕೂಡಲೇ ನೇಮಕಾತಿ ಅಧಿಸೂಚನೆ ಹೊರಡಿಸಬೇಕು. ಎಲ್ಲಾ ರೀತಿಯ

ಮೂರನೇಯ ಪುಟಕ್ಕೆ

ಸಿಂಧನೂರು ಬೀದಿ ವ್ಯಾಪಾರಿಗಳ ಹಕ್ಕುಗಳ ಜೀವನೋಪಾಯ ರಕ್ಷಿಸಲು: ಮಾನಸಯ್ಯ ಒತ್ತಾಯ

ಸಿಂಧನೂರು,ಮೇ.06-

2014ರ ಬೀದಿ ವ್ಯಾಪಾರಿಗಳ ಕಾಯ್ದೆಯನ್ನು ತಕ್ಷಣ ಜಾರಿಗೊಳಿಸುವುದು ಹಾಗೂ ಸಿಂಧನೂರಿನಲ್ಲಿ ಅನಧಿಕೃತವಾಗಿ ತೆರವುಗೊಳಿಸಲ್ಪಟ್ಟ ಬೀದಿ ವ್ಯಾಪಾರಿಗಳ ರಕ್ಷಣೆ ಕುರಿತು

ಟ್ರೇಡ್ ಯೂನಿಯನ್ ಸೆಂಟರ್ ಆಫ್ ಇಂಡಿಯಾ () ಪರವಾಗಿ, ಸಿಂಧನೂರು ಪಟ್ಟಣದಲ್ಲಿ ಬೀದಿ ವ್ಯಾಪಾರಿಗಳನ್ನು ಅನಧಿಕೃತವಾಗಿ ತೆರವುಗೊಳಿಸಿರುವ ಗಂಭೀರ ವಿಷಯವನ್ನು ನಿಮ್ಮ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಆರ್.ಮಾನಸಯ್ಯ ಪ್ರಧಾನ ಕಾರ್ಯದರ್ಶಿ ಟ್ರೇಡ್ ಯೂನಿಯನ್ ಸೆಂಟರ್ ಆಫ್ ಇಂಡಿಯನ್ ರಾಯಚೂರು ನಗರ ಸಭೆ ಆಯುಕ್ತರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ನಗರಸಭೆಯವರು ಯಾವುದೇ ಕಾನೂನು ಕ್ರಮಗಳನ್ನು ಅನುಸರಿಸದೆ ನೂರಾರು ಬೀದಿ ವ್ಯಾಪಾರಿಗಳನ್ನು ತೆರವುಗೊಳಿಸಿರುವುದು ಗಮನಕ್ಕೆ ಬಂದಿದೆ. ಇದರಿಂದ ಬಡ ಕಾರ್ಮಿಕ ಕುಟುಂಬಗಳಿಗೆ ಜೀವನೋಪಾಯದ ಗಂಭೀರ ಹಾನಿ ಉಂಟಾಗಿದೆ.



ಕಾನೂನು ಸ್ಥಿತಿ:2014ರ ಬೀದಿ ವ್ಯಾಪಾರಿಗಳ (ಜೀವ'ನೋಪಾಯ ರಕ್ಷಣೆಯ ಮತ್ತು ನಿಯಂತ್ರಣ) ಕಾಯ್ದೆ ಪ್ರಕಾರ ಕೆಳಗಿನ ನಿಯಂವ'ಂಗ'ಳ'ು ಕಡ್ಡಾಯವಾಗಿವೆ:

ಸರಿಯಾದ ಸಮೀಕ್ಷೆ ನಡೆಸದೆ ಹಾಗೂ ವ್ಯಾಪಾರ ಪ್ರಮಾಣಪತ್ರ / ಗುರುತಿನ ಚೀಟಿ ನೀಡದೆ ಯಾವುದೇ ಬೀದಿ ವ್ಯಾಪಾರಿಯನ್ನು ತೆರವುಗೊಳಿಸಲಾಗುವುದಿಲ್ಲ.

ಬೀದಿ ವ್ಯಾಪಾರಿಗಳ ಪ್ರತಿನಿಧಿತ್ವದೊಂದಿಗೆ ಟೌನ್ ವೆಂಡಿಂಗ್ ಸಮಿತಿ ರಚಿಸಬೇಕು.

30 ದಿನಗಳ ಪೂರ್ವ ನೋಟಿಸ್ ನೀಡದೆ ಯಾವುದೇ

ಮೂರನೇಯ ಪುಟಕ್ಕೆ



ಕೆ ಪಿ ಎಸ್ ಸಿ ಸುಧಾರಣೆ ಸದನ ಸಮಿತಿಗೆ. ಶಾಸಕ ಹಂಪನಗೌಡ ಬಾದರ್ಲಿ ನೇಮಕ.

ಸಿಂಧನೂರು, ಮೇ 6.

ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನಡೆಯುತ್ತಿರುವ ಅಕ್ರಮಗಳಿಗೆ ಕಡಿವಾಣ ಹಾಕಲು. ಮತ್ತು ಆಯೋಗದ ಕಾರ್ಯವೈಖರಿಯಲ್ಲಿ ಸಮಗ್ರ ಸುಧಾರಣೆ ಮತ್ತು ಬದಲಾವಣೆ ತರಲು ರಾಜ್ಯ ಸರ್ಕಾರವು ಮಹತ್ವದ ಸದನ

ಮೂರನೇಯ ಪುಟಕ್ಕೆ

ಗೃಹಲಕ್ಷ್ಮಿ ಹಣ ವಿಳಂಬಕ್ಕೆ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ

ರಾಯಚೂರು, ಮೇ 7-

ಗೃಹಲಕ್ಷ್ಮಿ ಯೋಜನೆಯಡಿ ಮಹಿಳೆಯರ ಖಾತೆಗೆ ಹಣ ಜಮೆಯಾಗದಿರುವ ಪ್ರಕರಣಗಳಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಪಾಮಯ್ಯ ಮುರಾರಿ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.



ಜಿಲ್ಲಾ ಪಂಚಾಯತ್‌ನ ಜಲ ನಿರ್ಮಲ ಸಭಾಂಗಣದಲ್ಲಿ ಗುರುವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ''ಜನರ ಹಣ ತಡೆಹಿಡಿಯಬೇಡಿ. ವಾರದೊಳಗೆ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ಸ್ಪಷ್ಟ ವರದಿ ನೀಡಬೇಕು. ಇಲ್ಲವಾದರೆ ಶೋಕಾಸ್ ನೋಟಿಸ್ ಹಾಗೂ ಕ್ರಿಮಿನಲ್ ಪ್ರಕರಣ ದಾಖಲಿಸುವ ಪರಿಸ್ಥಿತಿ ಬರುತ್ತದೆ'' ಎಂದು ಎಚ್ಚರಿಸಿದರು.

ಗೃಹಲಕ್ಷ್ಮಿ ಯೋಜನೆಯಡಿ ಅನೇಕ ಮಹಿಳೆಯರಿಗೆ ಹಣ ಜಮೆಯಾಗದಿರುವ ಬಗ್ಗೆ ಸಭೆಯಲ್ಲಿ ತೀವ್ರ ಚರ್ಚೆ ನಡೆಯಿತು. ಮೂರು ತಿಂಗಳಿಗೊಮ್ಮೆ ಇ-ಕೆವೈಸಿ ಪ್ರಕ್ರಿಯೆ ಕಡ್ಡಾಯವಾಗಿ ನಡೆಸಿ, ಫಲಾನುಭವಿಗಳ ಖಾತೆಗೆ ಹಣ ಸಮರ್ಪಕವಾಗಿ ಜಮೆಯಾಗುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಹಟ್ಟಿ ಗ್ರಾಮದ ಮಹಿಳೆಯರ ಸ್ತ್ರೀಶಕ್ತಿ ಸಂಘದ ಸುಮಾರು 25 ಕಂತಿನ ಹಣ ಆಧಾರ್ ತಾಂತ್ರಿಕ ಸಮಸ್ಯೆಯಿಂದ ಬಾಕಿ ಉಳಿದಿರುವ ಪ್ರಕರಣವನ್ನೂ ಪ್ರಸ್ತಾಪಿಸಿ, ತಕ್ಷಣ ಸಮಸ್ಯೆ ಪರಿಹರಿಸಿ ಹಣ ಬಿಡುಗಡೆ ಮಾಡಲು ನಿರ್ದೇಶಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಮೂವರು ಸಿಬ್ಬಂದಿ ಸಭೆಗೆ ಹಾಜರಾಗಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅಧ್ಯಕ್ಷರು, ''ಒಬ್ಬ ಅಧಿಕಾರಿ ಮಾತ್ರ ಸಭೆಗೆ ಬರಬೇಕು. ಉಳಿದವರು ಕಚೇರಿಯಲ್ಲಿ ಸಾರ್ವಜನಿಕರ ಕೆಲಸ ನಿರ್ವಹಿಸಬೇಕು'' ಎಂದು ತಾಕೀತು ಮಾಡಿದರು.

ಶಕ್ತಿ ಯೋಜನೆ ಕುರಿತು ಚರ್ಚಿಸಿ, ಗಡಿ ಭಾಗದ ಕೆಲವು ಅಂತರರಾಜ್ಯ ಮಾರ್ಗಗಳಲ್ಲೂ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲು ಮಾರ್ಗಸೂಚಿ ಬಂದಿರುವುದಾಗಿ ಸಾರಿಗೆ

ಮೂರನೇಯ ಪುಟಕ್ಕೆ

1.5 ಕೋಟಿ ರೂ ವೆಚ್ಚದಲ್ಲಿ ಸೋಮವಾರಪೇಟೆ ಹಿರೇಮಠದ ಶಿಲಾ ಮಂಟಪ ನಿರ್ಮಾಣ : ಅಭಿನವಶ್ರೀ

ರಾಯಚೂರು,ಮೇ.07-

ನಗರದ ಸೋಮವಾರಪೇಟೆ ಹಿರೇಮಠದಲ್ಲಿ ಶ್ರೀಮದ್ ಜಗದ್ಗುರು ಪಂಚಾಚಾರ್ಯರ, ಶ್ರೀಮಠದ ಹಿರಿಯ ಶ್ರೀಗಳಾದ ಲಿಂ. ರಾಚೋಟಿ ಶಿವಾಚಾರ್ಯ ಮಹಾಸ್ವಾಮಿಗಳವರ ಹಾಗೂ ವೀರತಪಸ್ವಿ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಕೃಪಾಶೀರ್ವಾದದಿಂದ ಮತ್ತು ಶ್ರೀಮಠದ ಹಿರಿಯ ಶ್ರೀಗಳ ಸಂಕಲ್ಪ ಮತ್ತು ಕನಸು ಹಾಗೂ ಶ್ರೀಮಠದ ಸರ್ವ ಸದ್ಭಕ್ತರ ತನು, ಮನ ಹಾಗೂ ಧನಾದಿ ತ್ರೀಕರಣ ಸೇವೆಯೊಂದಿಗೆ ಶ್ರೀಮಠದ ಇತಿಹಾಸದಲ್ಲಿ ಸಹಸ್ರ ಸಹಸ್ರ ಕಾಲದವರೆಗೆ ಪ್ರಶಿದ್ಧ ಹೊಂದುವಂತೆ ನಿರ್ಮಿಸಲಾಗುತ್ತಿರುವ 25 ಶಿಲಾಸ್ತಂಭಗಳ ಶಿಲಾ ಮಂಟಪದ ಕಾಮಗಾರಿಯನ್ನು ಶ್ರೀಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಅಭಿನವ ರಾಚೋಟಿ ವೀರ ಶಿವಾಚಾರ್ಯ ಮಹಾಸ್ವಾಮಿಗವರ ದಿವ್ಯ ಸಾನಿಧ್ಯದಲ್ಲಿ ಶ್ರೀಮಠದ ಶಾಸ್ತ್ರಿಗಳಾದ ಶಿವಯ್ಯ ಸ್ವಾಮಿಯವರ ತಂಡದವರ ಪೌರೋಹಿತ್ಯದಲ್ಲಿ ಶಿಲಾ ಸ್ತಂಭದ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶ್ರೀಮಠದ ಶ್ರೀಗಳು, ಮಾಜಿ ಶಾಸಕರಾದ ಎ. ಪಾಪಾರೆಡ್ಡಿ, ಮಹಾನಗರ ಪಾಲಿಕೆಯ ಮಾಜಿ ಅಧ್ಯಕ್ಷರಾದ ಕಡಗೋಲ ಆಂಜನೇಯ್ಯ, ಗದ್ವಾಲ ನರಸಣ್ಣ, ದೋತರಬಂಡಿ ಮಲ್ಲಿಕಾರ್ಜುನ ಹಾಗೂ ಇನ್ನುಳಿದ ಶ್ರೀಮಠದ ಹಿರಿಯ ಸದ್ಭಕ್ತರು ಸೇರಿ ವಿಶೇಷ ಪೂಜೆ ಸಲ್ಲಿಸಿ ಮಂಗಳಾರುತಿ ಬೆಳಗುವುದರ ಮೂಲಕ ಚಾಲನೆ ನೀಡಿದರು.



ಶಿಲಾ ಮಂಟಪದ ಭದ್ರ ಬುನಾಧಿಯ ಮೇಲೆ ಶಿಲಾ ಸ್ತಂಭಗಳನ್ನು ಜೋಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಸರ್ವ ಸದ್ಭಕ್ತರ ತನು ಮನ ಧನಾಧಿ ತ್ರೀಕರಣ ಸೇವೆಯಿಂದ ಈ ಶಿಲಾ ಮಂಟಪದ ಕಾರ್ಯ ಬರದಿಂದ ಸಾಗಿದೆ, ಇನ್ನೂ ಕೆಲವು ಭಕ್ತರು ತಮ್ಮ ಸೇವೆ ಸಲ್ಲಿಸುವವರೂ ಇದ್ದಾರೆ ಮುಂದೆಯೂ ತಮ್ಮ ಕೈಲಾದಸ್ಟು ಸೇವೆ ಸಲ್ಲಿಸುತ್ತಿದ್ದಾರೆ, ಯಾಕೆಂದರೆ ಯಾವು ಒಂದು ಭವನ ನಿರ್ಮಿಸಿದರೆ ಅದಕ್ಕೆ ಇಷ್ಟೇ ವರ್ಷ ಅಂಗ ಆಯುಷ್ಯ ಇರುತ್ತದೆ, ಆದರೆ ಈಗ ನಿರ್ಮಾಣವಾಗುತ್ತಿರುವ ಶಿಲಾ ಮಂಟಪಕ್ಕೆ ಆಯುಷ್ಯವೇ ಇರುವುದಿಲ್ಲ, ಯುಗ ಯುಗಗಳವರೆಗೆ ವಿರಾಜಮಾನವಾಗಿ ಸೋಮವಾರಪೇಟೆ ಹಿರೇಮಠದ ಐತಿಹಾಸಿಕ ಕೀರ್ತಿ ಬೆಳಗುವಂತಾದ್ದಾಗಿದೆ.

ನಂತರ ಶ್ರೀಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಅಭಿನವ ರಾಚೋಟಿ ವೀರ ಶಿವಾಚಾರ್ಯರು ಧರ್ಮ ಸಂದೇಶದಲ್ಲಿ ಮನುಷ್ಯ ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ ಕೊಟ್ಟು ನಾ ಕೆಟ್ಟೆನೆನಬೇಡ ಮುಂದೆ ನಿನಗಿದು ಕಟ್ಟಿಟ್ಟ ಬುತ್ತಿ ಸರ್ವಜ್ಞ ಎನ್ನುವ ಶರಣ ನುಡಿಯಂತೆ ಸತ್ಯ ಸಂಕಲ್ಪ ಅದು ಶಿವನ ಸಂಕಲ್ಪ, ಹಿರಿಯ ಶ್ರೀಗಳ ಕನಸಾಗಿತ್ತು ಸೋಮವಾರಪೇಟೆ ಹಿರೇಮಠಕ್ಕೆ ಸಾವಿರಾರು ವರ್ಷಗಳ ಇತಿಹಾಸವೇ ಇದೆ, ಅದರಂತೆ ಇಂದು ಶ್ರೀಮಠದ ಸರ್ವ ಸದ್ಭಕ್ತರು ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ ಇನ್ನೂ ಸಲ್ಲಿಸುವವರೂ ಇದ್ದಾರೆ.

ನಿರ್ಮಾಣಕ್ಕಿಂತ ಮೊದಲು ನಾವು ಶ್ರೀಮಠವನ್ನು ಜೀರ್ಣೋದ್ಧಾರ ಮಾಡಲು ಸಂಕಲ್ಪ ಮಾಡಿದ್ದೇವೆ ಎಂದು ಮಾಜಿ

ಮೂರನೇಯ ಪುಟಕ್ಕೆ

ದರ್ವೇಶ್ ಕಂಪನಿ ಹಗರಣ: ಸಿಎಂ ನಿವಾಸ ಮುಂದೆ ಪ್ರತಿಭಟನೆ ಎಚ್ಚರಿಕೆ

ರಾಯಚೂರು, ಮೇ 6-ಜಿಲ್ಲೆಯ ಇತಿಹಾಸದಲ್ಲೇ ಅತಿ ದೊಡ್ಡ ಆರ್ಥಿಕ ವಂಚನೆ ಪ್ರಕರಣಗಳಲ್ಲಿ ಒಂದಾಗಿ ಪರಿಗಣಿಸಲ್ಪಡುತ್ತಿರುವ ದರ್ವೇಶ್ ಕಂಪನಿ ಹಗರಣವು ಸಾವಿರಾರು ಕುಟುಂಬಗಳ ಬದುಕನ್ನು ಸಂಕಷ್ಟಕ್ಕೆ ತಳ್ಳಿದೆ. ಶೇರ್ ಮಾರ್ಕೆಟ್ ಹೆಸರಿನಲ್ಲಿ ಜನರಿಂದ ಸಾವಿರಾರು ಕೋಟಿ ರೂಪಾಯಿ ಸಂಗ್ರಹಿಸಿ ಬಳಿಕ ಯಾವ'ುದೇ ಜವಾಬ್ದಾರಿತನವಿಲ್ಲದೆ ಕಂಪನಿ ನಾಪತ್ತೆಯಾಗಿರುವುದು ಹೂಡಿಕೆದಾರರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದು, ದರ್ವೇಶ್ ಕಂಪನಿ ಹೂಡಿಕೆದಾರರಿಗೆ ಹಣ ಹಿಂತಿರುಗಿಸುತ್ತಿದ್ದರೆ ಸಿಎಂ ನಿವಾಸದ ಬಳಿ ಪ್ರತಿಭಟನೆ ನಡೆಸಲಾಗುವುದೆಂದು ಸಾಮಾಜಿಕ ಕಾರ್ಯಕರ್ತ ಅಂಬಾಜಿ ಮೈದರ್ಕರ್ ಅವರು ಹೇಳಿದರು.



ಅವರು ನಿನ್ನೆ ನ'ಗ'ರ'ದ' ಸುದ್ದಿಗಾರರೊಂದಿಗೆ ಮ'ಾತ'ನಾಡಿ, ನ'ಂತ'ರ' ಜಿಲ್ಲಾಧಿಕಾರಿಗಳ ಮ'ೂಲಕ' ಮುಖ್ಯಮಂತ್ರಿಗಳ ಮನವಿ ಸಲ್ಲಿಸಿ ಒತ್ತಾಯಿಸಿದೆ.

ಅಂಬಾಜಿ ರವರು ಈ ಪ್ರಕರಣಕ್ಕೆ ವಂಚನೆ ಮಾಡಿದ ಪ್ರಮುಖ ಹೆಸರನ್ನು ಆರೋಪಿಸಿದ್ದಾರೆ.ಈ ಪ್ರಕರಣದ ತನಿಖೆಯಲ್ಲಿ ಸಿಒಡಿ ಸಂಪೂರ್ಣ ವಿಫಲವಾಗಿದೆ

ಮೂರನೇಯ ಪುಟಕ್ಕೆ

ಗಣಿ ಬಾಧಿತ ಪ್ರದೇಶಗಳ ಅಭಿವೃದ್ಧಿಗೆ ರೂ.1146 ಕೋಟಿ ವೆಚ್ಚದ ಬೃಹತ್ ಯೋಜನೆ:

1183 ಕುಟುಂಬಗಳಿಗೆ ಸುಸಜ್ಜಿತ ವಸತಿ ಭಾಗ್ಯ



ವಿಜಯನಗರ,ಮೇ.07-

ಗಣಿ ಬಾಧಿತ ಪ್ರದೇಶಗಳ ಸಮಗ್ರ ಅಭಿವೃದ್ಧಿ ಹಾಗೂ ಅಲ್ಲಿನ ನಿವಾಸಿಗಳ ಪುನಶ್ಚೇತನಕ್ಕಾಗಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (ಏಡಿಛಿ) ವತಿಯಿಂದ ಸುಮಾರು 1,146 ಕೋಟಿ ರೂಪಾಯಿ ವೆಚ್ಚದಲ್ಲಿ ಅರ್ಹ ಫಲಾನುಭವಿಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸುಸಜ್ಜಿತ ವಸತಿ ಸೌಲಭ್ಯ ಕಲ್ಪಿಸಿಕೊಡಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ವಿ.ಸಿ ಹಾಲ್‌ನಲ್ಲಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (ಏಡಿಛಿ) ಯೋಜನೆಯಡಿ ಗಣಿಭಾದಿತ ಪ್ರದೇಶಗಳ ಅಭಿವೃದ್ಧಿ ಕುರಿತ ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗಣಿ ಬಾಧಿತ ಪ್ರದೇಶಗಳ ಪುನಶ್ಚೇತನ ಯೋಜನೆಯು ಅತ್ಯಂತ ಮಹತ್ವದ್ದಾಗಿದ್ದು, ಇದರಲ್ಲಿ ಯಾವುದೇ ರೀತಿಯ ವಿಳಂಬ ಅಥವಾ ಸಮನ್ವಯತೆಯ ಕೊರತೆಯನ್ನು ಸಹಿಸುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ವಸತಿ ಸಂಕೀರ್ಣಗಳ ನಿರ್ಮಾಣದ ವೇಳೆ ವಿವಿಧ ಇಲಾಖೆಗಳ ನಡುವೆ ಸಮನ್ವಯತೆ ಇರಬೇಕು. ರಸ್ತೆ ನಿರ್ಮಾಣವಾದ ನಂತರ ಪೈಪ್‌ಲೈನ್‌ಗಾಗಿ ರಸ್ತೆ ಅಗೆಯುವಂತಹ ತಪ್ಪುಗಳು ಮರುಕಳಿಸಬಾರದು.

1146 ಕೋಟಿಗಳ ಬೃಹತ್ ಮೊತ್ತದ ಯೋಜನೆಯಾಗಿರುವುದರಿಂದ, ಪ್ರತಿ ಹಂತದಲ್ಲೂ ಕಾಮಗಾರಿಯ ಗುಣಮಟ್ಟ ಪರಿಶೀಲಿಸಬೇಕು. ಕೇವಲ ಮನೆ ಕಟ್ಟುವುದಷ್ಟೇ ನಮ್ಮ ಗುರಿಯಲ್ಲ. ಮನೆಗಳು ವಾಸಕ್ಕೆ ಸಿದ್ಧವಾಗುವ ಮುನ್ನವೇ ಕುಡಿಯುವ ನೀರು, ಒಳಚರಂಡಿ ಮತ್ತು ವಿದ್ಯುತ್ ವ್ಯವಸ್ಥೆ ಸಂಪೂರ್ಣವಾಗಿ ಸಿದ್ಧವಿರಬೇಕು.

1183 ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಲೋಪವಾಗಬಾರದು. ಅರ್ಹ ಗಣಿ ಬಾಧಿತ ಕುಟುಂಬಗಳಿಗೆ ಮಾತ್ರ ಈ ಸೌಲಭ್ಯ ತಲುಪುವಂತೆ ಹಾಗೂ ಯಾವೊಬ್ಬ ಅರ್ಹ ಫಲಾನುಭವಿಯೂ ಯೋಜನೆಯಿಂದ ಹೊರಗುಳಿಯಬಾರದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಡಿಪಿಆರ್ ಅನುಮೋದನೆಗೊಂಡಿರುವುದರಿಂದ, ನಿಗದಿತ ಕಾಲಮಿತಿಯೊಳಗೆ ಟೆಂಡರ್ ಪ್ರಕ್ರಿಯೆ ಮುಗಿಸಿ ಕಾಮಗಾರಿ ಆರಂಭಿಸಬೇಕು. ಗಣಿ ಪ್ರದೇಶಗಳಲ್ಲಿ ದಶಕಗಳಿಂದ ಕಷ್ಟ ಅನುಭವಿಸುತ್ತಿರುವ ಜನರಿಗೆ ಈ ಯೋಜನೆ ಮೂಲಕ ನ್ಯಾಯ ಒದಗಿಸುವುದು ನಮ್ಮ ಆದ್ಯತೆಯಾಗಿದೆ. ಇಂತಹ ಮಹತ್ವಾಕಾಂಕ್ಷಿ ಯೋಜನೆಯ ಮೂಲಕ ಗಣಿ ಬಾಧಿತ ಪ್ರದೇಶಗಳ ಚಿತ್ರಣವನ್ನೇ ಬದಲಿಸಲು ಆಡಳಿತ ಮಂಡಳಿ ಮುಂದಾಗಿರುವುದು ಶ್ಲಾಘನೀಯ. ಈ ನಿಟ್ಟಿನಲ್ಲಿ ನಿರ್ಲಕ್ಷ??ದಿಹಿದ್ದು, ವಿಳಂಬ ಮಾಡುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಮನೋಹರ್ ಮಾತನಾಡಿ, ಈ ಯೋಜನೆಗೆ ಸಂಬಂಧಪಟ್ಟಂತೆ ಸಂಪೂರ್ಣ ನೀಲನಕ್ಷೆ (ಡಿಪಿಆರ್) ಈಗಾಗಲೇ ಸಿದ್ಧವಾಗಿದ್ದು, ಅದಕ್ಕೆ ಸಂಬಂಧಪಟ್ಟ ಇಲಾಖೆಗಳಿಂದ ಅಧಿಕೃತ ಅನುಮೋದನೆ ಸಹ ದೊರೆತಿದೆ. ಜಿಲ್ಲೆಯ ಗಣಿ ಬಾಧಿತ ಪ್ರದೇಶಗಳಾದ ಜಂಬುನಾಥ ಹಳ್ಳಿ ಕ್ಯಾಂಪ್‌ನಲ್ಲಿ 52 ಕುಟುಂಬ, ಕೆ.ಎಂ.ಎಂ.ಐ ಕ್ಯಾಂಪ್‌ನಲ್ಲಿ 94, ಬೊಂಬೆ ಕ್ಯಾಂಪ್‌ನಲ್ಲಿ 90, ಹಂಪಿನಕಟ್ಟೆಯಲ್ಲಿ 83, ಅಂಬೇಡ್ಕರ್ ನಗರದಲ್ಲಿ 84, ಕಾರಿಗನೂರು 139, ಕೊಟ್ರೇಶ್ವರ ನಗರ ಕ್ಯಾಂಪ್‌ನಲ್ಲಿ 113 ಕುಟುಂಬಗಳು ವಾಸವಾಗಿದ್ದು ಅರ್ಹ ಫಲಾನುಭವಿಗಳಿಗೆ ಈಗಾಗಲೇ ನಿವೇಶನ ಕಲ್ಪಿಸಲಾಗಿದೆ. ಶಿಕಾರಿ ಕ್ಯಾಂಪ್ ನಲ್ಲಿ 73 ಕುಟುಂಬಗಳು ವಾಸವಾಗಿದ್ದು ಅದರಲ್ಲಿ 60 ಫಲಾನುಭವಿಗಳಿಗೆ ನಿವೇಶನ, ಹಕ್ಕುಪತ್ರ ವಿತರಿಸಲಾಗಿದೆ. ಇನ್ನುಳಿದ 10 ಫಲಾನುಭವಿಗಳಿಗೆ ನಿವೇಶನ ಕೊರತೆಯಿಂದ ಬಾಕಿ ಉಳಿದಿವೆ. ನಿವೇಶನ ಕಲ್ಪಿಸುವುದರ ಜತೆಗೆ ರಾಜೀವ್ ಗಾಂಧಿ, ಇನ್ನಿತರೆ ವಸತಿ ಯೋಜನೆಯಡಿ ಇಲ್ಲಿನ ಸುಮಾರು 1,183 ಅರ್ಹ ಫಲಾನುಭವಿಗಳಿಗೆ ನೀರು, ರಸ್ತೆ, ಬೀದಿ ದೀಪ ಅಗತ್ಯ ಮೂಲ ಸೌಕರ್ಯಗಳನ್ನೊಳಗೊಂಡ ವಸತಿ ನಿರ್ಮಿಸಿ ಕೊಡಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಇನ್ನುಳಿದ ಫಲಾನುಭವಿಗಳಿಗೆ ನಿವೇಶನ ನೀಡಲು ಬೇಕಾದ ಅಗತ್ಯ ಕ್ರಮವಹಿಸಬೇಕು. ಯೋಜನೆಯು ವಿಳಂಬವಾಗದಂತೆ ಮತ್ತು ಗುಣಮಟ್ಟದಿಂದ ಕೂಡಿರುವಂತೆ ನೋಡಿಕೊಳ್ಳಲು ಅಧಿಕಾರಿಗಳ ಸಮನ್ವಯತೆ ಅತ್ಯಗತ್ಯ. ೦ ಅಧಿಕಾರಿಗಳು ಪರಸ್ಪರ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಹಾಗೂ ನಿಗದಿತ ಅವಧಿಯೊಳಗೆ ರಸ್ತೆ, ನೀರು, ವಿದ್ಯುತ್ ಸೇರಿದಂತೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಿದರು. ಈ ಯೋಜನೆಯು ಗಣಿಗಾರಿಕೆಯಿಂದ ಬಾಧಿತವಾದ ಕುಟುಂಬಗಳಿಗೆ ನೆಮ್ಮದಿಯ ಬದುಕು ಕಟ್ಟಿಕೊಡುವ ನಿಟ್ಟಿನಲ್ಲಿ ಕೆ.ಎಂ.ಇ.ಆರ್.ಸಿ ನಿಧಿಯ ಅಡಿಯಲ್ಲಿ ಕೈಗೊಳ್ಳಲಾಗಿರುವ ಈ ಕ್ರಮವು ಪ್ರಮುಖ ಮೈಲಿಗಲ್ಲಾಗಲಿದೆ ಎಂದು ತಿಳಿಸಿದರು.

ಬದೆಯಲ್ಲಿ ಉಪವಿಭಾಗಾಧಿಕಾರಿ ವಿವೇಕ್, ತಹಶೀಲ್ದಾರ್ ಶೃತಿ.ಎಂ, ನಗರಸಭೆ ಪೌರಾಯುಕ್ತ ಶಿವಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ದೇವದಾಸಿ ಪದ್ಧತಿಯು ಸಮಾಜಕ್ಕೆ ಮಾರಕವಾದ ರೋಗವಿದ್ದಂತೆ- ಇಂದಮ್ಮ



ಕಲಬುರಗಿ,ಮೇ.07-

ದೇವದಾಸಿ ಪದ್ಧತಿಯು ಸಮಾಜಕ್ಕೆ ಮಾರಕವಾದ ರೋಗವಿದ್ದಂತೆ. ಹೆಣ್ಣೊಬ್ಬಳಿಗೆ ಮುತ್ತುಕಟ್ಟಿ ದೇವದಾಸಿಯನ್ನಾಗಿ ಮಾಡುವುದು ಕಾನೂನು ಪ್ರಕಾರ ಅಪರಾಧ. ಇಂತಹ ಕೃತ್ಯ ಎಸಗುವವರಿಗೆ ಹಾಗೂ ಭಾಗಿಯಾದವರಿಗೆ 5 ವರ್ಷ ಜೈಲು ಶಿಕ್ಷೆ ಮತ್ತು 5 ರಿಂದ 10 ಸಾವಿರದವರೆಗೆ ದಂಡ ವಿಧಿಸಲಾಗುತ್ತದೆ ಎಂದು ನಿಂಬಾಳ್ ಪಿ.ಎಸ್.ಐ ಇಂದಮ್ಮ ಪಾಟೀಲ್ ಹೇಳಿದರು.

ಅಫಜಲಪುರ ತಾಲೂಕಿನ ಮಣ್ಣೂರು ಗ್ರಾಮದ ಶ್ರೀ ಯಲ್ಲಮ್ಮಾದೇವಿ ದೇವಸ್ಥಾನದ ಆವರಣದಲ್ಲಿ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ದೇವದಾಸಿ ಪುನರ್ವಸತಿ ಯೋಜನೆ ವತಿಯಿಂದ ಮೂರು ದಿನಗಳ ಕಾಲ ಆಯೋಜಿಸಿದ್ದ ಭಕ್ತಾದಿಗಳಿಗೆ ದೇವದಾಸಿ ಪದ್ಧತಿಯ ದುಷ್ಪರಿಣಾಮಗಳ ಬಗ್ಗೆ ಜತ್ರಾ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ ಅವರು 1982ರ ದೇವದಾಸಿ ಸಮರ್ಪಣಾ ನಿಷೇಧ ಕಾಯ್ದೆಯ ಅಡಿಯಲ್ಲಿ ಭಿಕ್ಷೆ ಬೇಡುವುದನ್ನು ಹಾಗೂ ಬೆತ್ತಲೆ ಸೇವೆ ಮಾಡುವುದು ಅಪರಾದ ಎಂದು ತಿಳಿಸಿದರು.

ನಂತರ ಮಾತನಾಡಿದ ದೇವದಾಸಿ ಪುನರ್ವಸತಿ ಯೋಜನಾ ಅನುಷ್ಠಾನಾಧಿಕಾರಿ ಬಸವರಾಜ ಆರ್.

ನಿಂಬ ರ್ಗಿಕರ್ ಅವರು ಮಾತನಾಡಿ ಭಕ್ತರಿಗೆ ಅನುಕೂಲವಾಗುವಂತೆ ಮಾಹಿತಿ ಕೇಂದ್ರಗಳನ್ನು ತೆರೆದು ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

1982ರ ದೇವದಾಸಿ ಸಮರ್ಪಣಾ ನಿಷೇಧ ಕಾಯ್ದೆಯ ಅಡಿಯಲ್ಲಿ ಭಿಕ್ಷೆ ಬೇಡುವುದನ್ನು ಹಾಗೂ ಬೆತ್ತಲೆ ಸೇವೆ ಮಾಡುವುದನ್ನು ತಡೆಯಲು ಧ್ವನಿವರ್ಧಕಗಳ ಮೂಲಕ ವ್ಯಾಪಕ ಪ್ರಚಾರ ನಡೆಸಲಾಯಿತು.

ಜಾತ್ರೆ ಯ ಪ್ರಮುಖ ಬೀದಿಗಳಲ್ಲಿ ಕರಪತ್ರ ಗಳನ್ನು ಹಂಚಿ, ಪೋಸ್ಟರ್‌ಗಳನ್ನು ಅಂಟಿಸುವ ಮೂಲಕ ಭಕ್ತರಲ್ಲಿ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಜಾತ್ರಾ ಸಮಿತಿ ಸದಸ್ಯರಾದ ಮಹೇಶ ಪ್ಯಾಟಿ, ಎ.ಎಸ್.ಐ ರಾಜಶೇಖರ ಮುದಗಲ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಬ್ಬಂದಿ ಶಾರದಾ ಅವಟಿ, ಮಲ್ಲಿಕಾರ್ಜುನ ದೊಡ್ಡಮನಿ, ನಾಮದೇವ ಗುಡೂರ, ಮಾಯ್.ಡಿ ಬಡಿಗೇರಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.



ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ವಿಮೆ ಯೋಜನೆ

ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ

ಬಾಗಲಕೋಟೆ : ಮೇ 07-

ಅನಾನುಕೂಲಕರ ಹವಾಮಾನದಿಂದ ಉಂಟಾಗುವ ಬೆಳೆ ನಷ್ಟದಿಂದ ರೈತರನ್ನು ರಕ್ಷಿಸುವ ಉದ್ದೇಶದಿಂದ ಜಾರಿಗೆ ತರಲಾದ ಹವಾಮಾನ ಆಧಾರಿತ ವಿಮೆ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸು ವಂತೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಬುಧವಾರ ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ವಿಮೆ ಯೋಜನೆ ಕುರಿತು ಜರುಗಿದ ಜಿಲ್ಲಾ ಮಟ್ಟ ತಾಂತ್ರಿಕ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಹವಾಮಾನ ಆಧಾರಿತ ವಿಮೆ ಯೋಜನೆಯ ಮರು ವಿನ್ಯಾಸದ ಪ್ರಮುಖ ಅಂಶಗಳನ್ನು ವಿವರವಾಗಿ ಚರ್ಚಿಸಿದರು. ಇದು ಮಳೆ ತಾಪಮಾನ ಮತ್ತು ತೇವಾಂಶದಂತಹ ಪ್ರತಿಕೂಲ ಹವಾಮಾನ ವೈಪರಿತ್ಯಗಳಿಂದ ಉಂಟಾಗುವ ತೋಟಗಾರಿಕೆ ಮತ್ತು ವಾಣಿಜ್ಯ ಬೆಳೆಗಳಾದ ದಾಳಿಂಬೆ ಮತ್ತು ದ್ರಾಕ್ಷಿ ಬೆಳೆ ನಷ್ಟಕ್ಕೆ ಪರಿಹಾರ ಒದಗಿಸುವ ಯೋಜನೆಯಾಗಿದೆ ಎಂದು ತಿಳಿಸಿದರು.

ಈ ಯೋಜನೆಯಡಿ ಮುಖ್ಯವಾಗಿ ಬೆಳೆ ಕಟಾವು ಪರಿಶೀಲನೆಗೆ ಬದಲಾಗಿ ಹವಾಮಾನ ಕೇಂದ್ರಗಳ ದತ್ತಾಂಶಗಳ ಆಧರಿಸಿ ಪರಿಹಾರ ನೀಡಲಾಗುತ್ತದೆ. ಅಲ್ಲದೇ ಬೆಳೆ ಬೆಳವಣಿಗೆಯ ಹಂತಗಳನ್ನು ಗಮನಿಸಿ ವಿಮಾ ಮೊತ್ತ ನಿಗದಿಪಡಿಸಲಾಗುತ್ತದೆ. ಹವಾಮಾನ ಸೂಚ್ಯಂಕಗಳ ಆಧಾರದ ಮೇಲೆ ಸ್ವಯಂ ಚಾಲಿತವಾಗಿ ಪರಿಹಾರ ಬಿಡುಗಡೆ ಮಾಡಲಾಗುತ್ತದೆ, ಬೆಳೆ ಹಾನಿಯ ಸಂದರ್ಭದಲ್ಲಿ ನೇರ ವಿಮಾ ಪಾವತಿಯನ್ನು ಬೆಳೆ ಸಾಲ ಪಡೆದ ಮತ್ತುಸಾಲ ಪಡೆಯದ ರೈತರಿಗೆ ಒದಗಿಸಲಾಗುತ್ತದೆ. ಈ ಯೋಜನೆ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಜೊತೆ ಜಾರಿಯಲ್ಲಿರುತ್ತದೆ ಎಂದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ ಹವಾಮಾನ ವೈಪರಿತ್ಯಗಳಿಂದ ರೈತರಿಗೆ ಆಗುವ ನಷ್ಟವನ್ನು ತಗ್ಗಿಸಲು ಈ ಯೋಜನೆ ಸಹಾಯಕವಾಗಿದ್ದು, ಇದರ ಬಗ್ಗೆ ರೈತರಲ್ಲಿ ಹೆಚ್ಚಿನ ತಿಳುವಳಿಕೆ ನೀಡುವ ಕೆಲಸವಾಗಬೇಕು ಎಂದು ತಿಳಿಸಿದರು. ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಯೋಜನೆಯ ಲಾಭ ರೈತರಿಗೆ ಮುಟ್ಟಿಸುವ ಕೆಲಸವಾಗಬೇಕು. ರೈತರು ಈ ಯೋಜನೆಯ ಬಗ್ಗೆ ತಾಲೂಕಾ ಮತ್ತು ಹೋಬಳಿ ಮಟ್ಟದ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದರು.

ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ಲೀಡ್ ಬ್ಯಾಂಕ್‌ನ ವ್ಯವಸ್ಥಾಪಕ ರಾಜಕುಮಾರ ಹೂಗಾರ, ಜಿಲ್ಲಾ ಸಾಂಖ್ಯಿಕ ಅಧಿಕಾರಿ ಗೌರಮ್ಮ ಸುಂಕದ ಸೇರಿದಂತೆ ತೋಟಗಾರಿಕೆ ವಿವಿಯ ಸಂಶೋಧನಾ ನಿರ್ದೇಶಕರು, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು, ಎಲ್ಲ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗೂ ವಿಮಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಮಕ್ಕಳ ಪಾಲನಾ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಭಾಗೀದಾರರಿಗೆ ತರಬೇತಿ ಕಾರ್ಯಕ್ರಮ

ಮಕ್ಕಳ ಮೇಲೆ ಯಾವುದೇ ರೀತಿಯ ಹಲ್ಲೆ, ದೌರ್ಜನ್ಯ, ಕಿರುಕುಳಗಳು ನಡೆಯದಂತೆ ಕ್ರಮವಹಿಸಿ: ಸಿಂಧು ಅಂಗಡಿ

ಕೊಪ್ಪಳ ಮೇ 07-

ಮಕ್ಕಳ ಮೇಲೆ ಯಾವುದೇ ರೀತಿಯ ಹಲ್ಲೆ, ದೌರ್ಜನ್ಯ ಮತ್ತು ಕಿರುಕುಳಗಳು ನಡೆಯದಂತೆ ಮಕ್ಕಳ ಪಾಲನಾ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಭಾಗೀದಾರರು ಸೂಕ್ತ ಕ್ರಮವಹಿಸಬೇಕು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಸಿಂಧು ಅಂಗಡಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ಹಾಗೂ ವೇರ್ ಆರ್ ಇಂಡಿಯನ್ ಚಿಲ್ಡನ್ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳ ಮುಖ್ಯಸ್ಥರುಗಳು ಮತ್ತು ಭಾಗೀದಾರ ಅಧಿಕಾರಿಗಳಿಗೆ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ದತ್ತು ಮಾರ್ಗಸೂಚಿಗಳ-2022ರ ಕುರಿತ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಅನ್ವಯ ಮಕ್ಕಳನ್ನು ಜೈವಿಕ ಪಾಲಕರಿಂದ ಅನಗತ್ಯವಾಗಿ ಬೇರ್ಪಡೆಸುವಂತಿಲ್ಲ. ಮಗುವಿನ ಹಿತದೃಷ್ಟಿಯಿಂದ ತೀರಾ ಅಗತ್ಯವಿದ್ದಲ್ಲಿ ಮಾತ್ರವೇ ಕುಟುಂಬದಿಂದ ಬೇರ್ಪಡಿಸಬಹುದು. ದತ್ತು ಪೂರ್ವದಲ್ಲಿ ಮಕ್ಕಳೊಂದಿಗೆ ಆಪ್ತ ಸಮಾಲೋಚನೆ ಕಡ್ಡಾಯ. ಮಕ್ಕಳ ಮೇಲೆ ಯಾವುದೇ ರೀತಿಯ ಹಲ್ಲೆ, ದೌರ್ಜನ್ಯ ಮತ್ತು ಕಿರುಕುಳಗಳು ನಡೆಯದಂತೆ ನೋಡಿಕೊಳ್ಳಬೇಕು. ಸಾಂಸ್ಥಿಕ ಸೇವೆಯು ಮಕ್ಕಳಿಗೆ ಕೊನೆಯ ಆಯ್ಕೆ ಮಗುವಿನ ಪೋಷಣೆ ಮತ್ತು ರಕ್ಷಣೆ ಕುಟುಂಬದ ಹೊಣೆಗಾರಿಕೆ ಮರಳಿ ಕುಟುಂಬಕ್ಕೆ ಸೇರ್ಪಡೆ ಮತ್ತು ಪುನಃ ಸ್ಥಾಪನೆಯ ಬಗ್ಗೆ ಮತ್ತು ಯಾವುದೇ ಪುನರವಸತಿ ಕ್ರಮಗಳು ಮಗುವಿನ ಹಿತದೃಷ್ಟಿಯಿಂದ ಕೈಗೊಳ್ಳುವಂತೆ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015ರ ಮೂಲ ತತ್ವದಲ್ಲಿ ತಿಳಿಸುತ್ತದೆ. ಈ ಎಲ್ಲಾ ಅಂಶಗಳನ್ನು ಪಾಲಿಸಿ ನಿಮ್ಮ ಸಂಸ್ಥೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಯಾವುದೇ ಮಗುವಿನ ಪಾಲಕರು ಕನಿಷ್ಠ ಮಕ್ಕಳ ಭೇಟಿಗೂ ಸಹ ಆಗಮಿಸದಿದ್ದರೆ, ಅಂತಂಹ ಮಕ್ಕಳನ್ನು ಗುರುತಿಸಿ ದತ್ತು ಕಾರ್ಯಕ್ರಮಕ್ಕೆ ಒಳಪಡಿಸಿ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಪ್ರಕಾಶ ಕಡಗದ ಅವರು ಮಾತನಾಡಿ, ಜಿಲ್ಲೆಯಲ್ಲಿ ಕಳೆದ 10 ವರ್ಷಗಳಲ್ಲಿ 23 ಮಕ್ಕಳು ಪರಿತ್ಯಜಿಸಲ್ಪಟ್ಟಿದ್ದು, 44 ಮಕ್ಕಳನ್ನು ಪಾಲಕರು ಮಕ್ಕಳ ಕಲ್ಯಾಣ ಸಮಿತಿಗೆ ಆಧ್ಯಾರ್ಪಿಸಿರುತ್ತಾರೆ. ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015ರಡಿ ಯಲ್ಲಿ, ಕೇಂದ್ರ ದತ್ತು ಪ್ರಾಧಿಕಾರದ ಸಹಯೋಗದೊಂದಿಗೆ ಒಟ್ಟು 53 ಮಕ್ಕಳಲ್ಲಿ 44 ಮಕ್ಕಳನ್ನು ದೇಶ ದೊಳಗೆ ಹಾಗೂ 9 ಮಕ್ಕಳನ್ನು ವಿದೇಶಿ ಪಾಲಕರಿಗೆ ಕಾನೂನು ಬದ್ಧ ವಾಗಿ ದತ್ತು ನೀಡಲಾಗಿದೆ ಎಂದು ತಿಳಿಸಿದರು. ಬೆಂಗಳೂರಿನ ವೇರ್ ಆರ್ ಇಂಡಿಯನ್ ಚಿಲ್ಡನ್ ಸಂಸ್ಥೆಯ ಯೋಜನಾ ನಿರ್ದೇಶಕರಾದ ಅಮೃ ತಾ ಅವರು, ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015, ತಿದ್ದುಪ ಡಿ-2021 ಕುರಿತು ಹಾಗೂ ವೇರ್ ಆರ್ ಇಂಡಿ ಯನ್ ಚಿಲ್ಡನ್ ಸಂಸ್ಥೆಯ ಯೋಜ ನಾಧಿಕಾರಿಗಳಾದ ಶ್ರೇಯಸ್ ಮತ್ತು ಶಿವರಾಜ್ ದತ್ತು ಮಾರ್ಗ ಸೂಚಿ ಗಳು-2022ರ' ಬಗ್ಗೆ ವಿವರಿಸಿದರು. ಈ ತರಬೇತಿಯಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು, ಜಿಲ್ಲೆಯ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು. ಶಿವರಾಜ್ ಅವರು ಕಾರ್ಯಕ್ರಮ ನಿರೂಪಿಸಿ ದರು ಪ್ರಸ್ತಾವಿಕವಾಗಿ ಮಾತನಾಡಿ ದರು. ರವಿಕುಮಾರ ಪವಾರ ಸ್ವಾಗ ತಿಸಿದರೆ, ರವಿ ಬಡಿಗೇರ ವಂದಿಸಿದರು.

ಬೀದರನಲ್ಲಿ ರಾಜ್ಯ ಪತ್ರಕರ್ತರ ಅರ್ಥಪೂರ್ಣ ಸಮ್ಮೇಳನ: ಧನ್ಯವಾದ ಸಮರ್ಪಣಾ ಸಮಾರಂಭದಲ್ಲಿ ತಗಡೂರು ಶ್ಲಾಘನೆ

ಬೆಂಗಳೂರು,ಮೇ.07-

ಬಸವನ ನಾಡು, ಸೂಫಿ ಸಂತರ ಬೀಡು ಬೀದರನಲ್ಲಿ ಎರಡು ದಿನಗಳು ನಡೆದ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಅಚ್ಚುಕಟ್ಟಾಗಿ ಸಂಘಟಿಸಿ, ಯಶಸ್ವಿಗೊಳಿಸಿದ ಹಿನ್ನೆಲೆಯಲ್ಲಿ ಸಮ್ಮೇಳನದ ಯಶಸ್ವಿಗಾಗಿ ಶ್ರಮಿಸಿದವರು ಮತ್ತು ಸಹಕರಿಸಿದವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ)ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಸನ್ಮಾನಿಸಿದರು. ಬೀದರ ಎಸ್‌ಪಿ ಗೆಸ್ಟ್ ಹೌಸ್ ಆವರಣದಲ್ಲಿ ನಡೆದ ಸಮಾರಂಭದಲ್ಲಿ ವಸತಿ, ಆಹಾರ, ಸಾರಿಗೆ, ಪ್ರಚಾರ,

ಮೆರವಣಿಗೆ, ನೋಂದಣಿ, ಅತಿಥಿ ಸತ್ಕಾರ, ಸಾಂಸ್ಕೃತಿಕ, ಸ್ಮರಣ ಸಂಚಿಕೆ, ಮಹಿಳಾ ಸಮಿತಿಯಿಂದ ಹಿಡಿದು ವಸ್ತು ಪ್ರದರ್ಶನ, ಛಾಯಾಚಿತ್ರ ಪ್ರದರ್ಶನ ಸಮಿತಿ ತನಕ ಎಲ್ಲಾ ಉಪ ಸಮಿತಿಗಳ ಪ್ರಧಾನ ಸಂಚಾಲಕರು, ಸಂಚಾಲಕರು, ಸಹ ಸಂಚಾಲಕರ ಸೇವೆಯನ್ನು ಸ್ಮರಿಸಿ ಸನ್ಮಾನಿಸಲಾಯಿತು. ಸಮ್ಮೇಳನಕ್ಕೆ ಒಂದೊಂದು ಜವಬ್ದಾರಿ ವಹಿಸಿಕೊಂಡು ಸಹಕಾರ ನೀಡಿದವರನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕಡಿಮೆ ಅವಧಿಯಲ್ಲಿ ಸಮ್ಮೇಳನವನ್ನು ವ್ಯವಸ್ಥಿತವಾಗಿ ಸಂಘಟಿಸಿದ ಬೀದರ್ ಜಿಲ್ಲಾ ಘಟಕ, ಬೀದರ್ ಪತ್ರಕರ್ತರು, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಡಳಿತ ಮತ್ತು ನಾಗರೀಕರಿಗೆ ಧನ್ಯವಾದ ತಿಳಿಸಿದರು.

ಸಮ್ಮೇಳನದ ಮೆರವಣಿಗೆಯಿಂದ ಹಿಡಿದು ಊಟೋಪಚಾರ ತನಕ, ಸಮ್ಮೇಳನದ ಉದ್ಘಾಟನೆಯಿಂದ ಹಿಡಿದು ಹಲವು ವಿಚಾರ ಗೋಷ್ಠಿಗಳು, ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಸಮಾರೋಪ ತನಕ ಎಲ್ಲವೂ ವ್ಯವಸ್ಥಿತವಾಗಿ, ಅರ್ಥಪೂರ್ಣವಾಗಿ ನಡೆದಿವೆ ಎಂದು ತಿಳಿಸಿದರು.

ಸಮ್ಮೇಳನ ಎನ್ನುವುದು ಒಂದು ಮೆರಗು,ಸೊಬಗು. ಸಮ್ಮೇಳನದ ಆತಿಥ್ಯ ವಹಿಸಿಕೊಂಡಿದ್ದ ಬೀದರ್ ಘಟಕ ಸಮ್ಮೇಳನದ ದಿಬ್ಬಣವನ್ನು ಅಚ್ಚುಕಟ್ಟಾಗಿ, ಹಬ್ಬದ ರೂಪದಲ್ಲಿ ಸ್ವಾಗತಿಸಿ, ಸತ್ಕರಿಸಿ ಬೀಳ್ಕೊಟ್ಟಿರುವುದಕ್ಕೆ ಕೆಯುಡಬ್ಲ್ಯೂಜೆ ಅಭಾರಿಯಾಗಿದೆ ಎಂದು ತಗಡೂರು ಹೇಳಿದರು.

ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ, ಸಚಿವ ರಹೀಂಖಾನ್ ಸೇರಿದಂತೆ ಎಲ್ಲಾ ಶಾಸಕರು ಮತ್ತು ಜನಪ್ರತಿನಿಧಿಗಳು ಮತ್ತು ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಸೇರಿದಂತೆ ಎಲ್ಲ ತಾಲೂಕು ಸಂಘಗಳಿಗೂ ರಾಜ್ಯ ಸಂಘ ಅಭಾರಿಯಾಗಿದೆ ಎಂದು ಶಿವಾನಂದ್ ಹೇಳಿದರು.

ಬೀದರ್ ಜಿಲ್ಲಾ ಘಟಕ ಅಧ್ಯಕ್ಷ ಆನಂದ ದೇವಪ್ಪ ಮಾತನಾಡಿ, ರಾಜ್ಯ ಸಂಘದ ಅಧ್ಯಕ್ಷರು ನಮ್ಮ ಮೇಲೆ ವಿಶ್ವಾಸವಿಟ್ಟು ಸಮ್ಮೇಳನವನ್ನು ನೀಡಿ, ಸಹಕಾರ ಮಾಡಿದ್ದನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಹಾಗೆಯೇ ಸಮ್ಮೇಳನಕ್ಕಾಗಿ ದುಡಿದವರಿಗೆ ಹೃದಯಪೂರ್ವಕವಾದ ಧನ್ಯವಾದ ಎಂದು ಹೇಳಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ಮಾತನಾಡಿ, ರಾಜ್ಯ ಸಂಘದ ಪರವಾಗಿ ಧನ್ಯವಾದ ಸಲ್ಲಿಸಿದರು.

ಕಲಬುರ್ಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಾಬರಾವ ಯಡ್ರಾಮಿ, ಕೆಯುಡಬ್ಲ್ಯೂಜೆ ರಾಜ್ಯ ಸಮಿತಿ ಸದಸ್ಯರಾದ ಭವಾನಿಸಿಂಗ್ ಠಾಕೂರ್ ಮತ್ತಿತರರು ಉಪಸ್ಥಿತರಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಗುರುದ್ವಾರದ ಮುಖ್ಯಸ್ಥರು ಸೇರಿದಂತೆ ಹಲವರನ್ನು ಸನ್ಮಾನಿಸಲಾಯಿತು. ರಾಜ್ಯ ಸಮಿತಿ ಸದಸ್ಯರಾದ ಅಪ್ಪರಾವ್ ಸೌದಿ ಅವರು ಕಾರ್ಯಕ್ರಮ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಸಮ್ಮೇಳನವನ್ನು ಯಶಸ್ವಿಗೊಳಿಸಿದ ಬೀದರ್ ಜಿಲ್ಲಾ ಘಟಕ ಅಧ್ಯಕ್ಷ ಆನಂದ ದೇವಪ್ಪ ಅವರನ್ನು ರಾಜ್ಯ ಸಂಘದ ಪರವಾಗಿ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸನ್ಮಾನಿಸಿದರು.

ಮಣ್ಣಿನ ಆರೋಗ್ಯ ರಕ್ಷಣೆಗೆ ವೈವಿಧ್ಯಮಯ ಬೆಳೆ ಪದ್ಧತಿ ಅನಿವಾರ್ಯ: ಡಾ.ರಮೇಶ ಎಂ.ಎನ್

ಬಳ್ಳಾರಿ,ಮೇ 07-

ಸುಸ್ಥಿರ ಕೃಷಿ ಮತ್ತು ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಲು ರೈತರು ಸಾಂಪ್ರದಾಯಿಕ ಏಕಬೆಳೆ ಪದ್ಧತಿಯಿಂದ ಹೊರಬಂದು ವೈವಿಧ್ಯಮಯ ಬೆಳೆ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಐಸಿಎಆರ್-ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ.ರಮೇಶ ಎಂ.ಎನ್ ಅವರು ಹೇಳಿದರು.



ಬಳ್ಳಾರಿಯ ಪ್ರಾದೇಶಿಕ ಕೇಂದ್ರದ ಐಸಿಎಆರ್- ಐಐಎಸ್ ಡಬ್ಲ್ಯೂಸಿ ವತಿಯಿಂದ ಬುಡಕಟ್ಟು ಉಪ ಯೋಜನೆ ಅಡಿ ಮಂಗಳವಾರ ಸಂಡೂರು ತಾಲ್ಲೂಕಿನ ಮಟ್ಟಜನ ಹಳ್ಳಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಮಣ್ಣಿನ ಆರೋಗ್ಯ ಚೇತನಕ್ಕಾಗಿ ವೈವಿಧ್ಯಮಯ ಬೆಳೆ ವ್ಯವಸ್ಥೆಗಳು ಜಾಗೃತಿ ಅಭಿಯಾನದಲ್ಲಿ ಭಾಗವಹಿಸಿ ಮಾತನಾ ಡಿದರು.

ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಸಾವಯವ ಗೊಬ್ಬರ ತಯಾರಿಸುವುದು ಮತ್ತು ಬೆಳೆ ಅವಶೇಷಗಳನ್ನು ಸುಡದೆ ಮಣ್ಣಿನಲ್ಲಿ ಸೇರಿಸುವುದು ಮಣ್ಣಿನ ಆರೋಗ್ಯಕ್ಕೆ ಪೂರಕ. ಪಶುಪಾಲನೆ, ಹಸಿರು ಎಲೆ ಗೊಬ್ಬರ ಮತ್ತು ಕೃಷಿ ಅರಣ್ಯ ವ್ಯವಸ್ಥೆಗಳು ರೈತರಿಗೆ ಹೆಚ್ಚುವರಿ ಆದಾಯ ನೀಡುವುದಲ್ಲದೆ, ಹವಾಮಾನ ವೈಪರೀತ್ಯ ಎದುರಿಸಲು ಶಕ್ತಿ ನೀಡುತ್ತವೆ ಎಂದು ತಿಳಿಸಿದರು.

ಮಣ್ಣು ಪರೀಕ್ಷೆಯ ಮಹತ್ವದ ಕುರಿತು ಮಾತನಾಡಿದ ಹಿರಿಯ ವಿಜ್ಞಾನಿ ಡಾ.ಮಹಿಪಾಲ್ ಚೌಧರಿ ಅವರು, ರೈತರು ಸರಿಯಾದ ಮೂಲ, ಸರಿಯಾದ ದರ, ಸರಿಯಾದ ಸಮಯ ಮತ್ತು ಸರಿಯಾದ ಸ್ಥಳ (4ಆರ್ ವಿಧಾನ) ಎಂಬ ಸೂತ್ರದಡಿ ರಸಗೊಬ್ಬರ ಬಳಸಬೇಕು. ಮಟ್ಟಜನಹಳ್ಳಿಯ ಕಬ್ಬಿಣ ಸಮೃದ್ಧ ಕೆಂಪು ಮಣ್ಣಿಗೆ ಜಿಪ್ಸಮ್ ಬಳಸುವುದರಿಂದ ಮಣ್ಣಿನ ರಚನೆ ಸುಧಾರಿಸಿ, ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ ಎಂದು ಮಾಹಿತಿ ನೀಡಿದರು.

ಹಿರಿಯ ವಿಜ್ಞಾನಿ ಡಾ.ರವಿ ಡುಪ್ಪಾಲ್ ಅವರು ಮಾತನಾಡಿ, ಬೆಳೆ ವೈವಿಧ್ಯೀಕರಣ ಮತ್ತು ಎಫ್‌ವೈಎಂ, ಹಸಿರು ಗೊಬ್ಬರ, ಕಾಂಪೋಸ್ಟ್, ವರ್ಮಿಕಾಂಪೋಸ್ಟ್, ಒಳಚರಂಡಿ ಕೆಸರು ಮತ್ತು ಪ್ರೆಸ್ ಮಡ್‌ನಂತಹ ಪರ್ಯಾಯ ಪೋಷಕಾಂಶ ಮೂಲ ಗಳ ಬಳಕೆಯಿಂದ ಇನ್‌ಪುಟ್ ವೆಚ್ಚವನ್ನು ಕಡಿಮೆ ಮಾಡುತ್ತದೆ, ಲಾಭದಾಯಕತೆಯನ್ನು ಸುಧಾರಿ ಸುತ್ತದೆ ಮತ್ತು ಪೋಷಕಾಂಶಗಳ ಬಳಕೆಯ ದಕ್ಷತೆ ಹೆಚ್ಚಿಸು ತ್ತದೆ ಎಂದು ಅವರು ಒತ್ತಿ ಹೇಳಿ ದರು.

ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳಲ್ಲಿ ಬೆಳೆ ಸ್ಥಿತಿಸ್ಥಾಪಕತ್ವವನ್ನು ಸುಧಾರಿಸುವಲ್ಲಿ ಮತ್ತು ಇಳುವರಿಯನ್ನು ಸ್ಥಿರಗೊಳಿಸುವಲ್ಲಿ ಅವುಗಳ ಪಾತ್ರ ಬಹುಮುಖ್ಯವಾಗಿದೆ. ವರ್ಮಿಕಾಂಪೋಸ್ಟ್, ಕಾಂಪೋಸ್ಟ್ ಮತ್ತು ಹಸಿರು ಗೊಬ್ಬರದ ಬಳಕೆಯಿಂದ ಕೃಷಿ ವೆಚ್ಚ ತಗ್ಗಿಸಿ ಲಾಭದಾಯಕತೆಯನ್ನು ಹೆಚ್ಚಿಸಿಕೊಳ್ಳುವ ವಿಧಾನಗಳನ್ನು ವಿವರಿಸಿದರು. ಈ ವೇಳೆ ಗ್ರಾಮದ ಸುಮಾರು 40ಕ್ಕೂ ಹೆಚ್ಚು ರೈತರು ಈ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮಾಹಿತಿ ಪಡೆದರು.

ಒಂದನೇಯ ಪುಟದಿಂದ

ಕಳಪೆ ದುರಸ್ಥಿ ಕೈಗೊಳ್ಳದಿದ್ದಲ್ಲಿ ಹೋರಾಟ ಎಚ್ಚರಿಕೆ

ಮಾಡಿಕೊಡಬೇಕು ಎಂದು ಒತ್ತಾಯಿಸಿದ್ದಾರೆ.

ಕುಡಿಯುವ ನೀರಿನ ಟ್ಯಾಂಕ್ ಕಾಮಗಾರಿ ಅಂದಾಜು ವೆಚ್ಚದಂತೆ ನಿರ್ಮಿಸದೆ ಮನ ಬಂದಂತೆ ಕಾಮಗಾರಿ ಪೂರ್ಣಗೊಳಿಸಲಾಗಿದೆ ಎಂದರು.ಸಮರ್ಪಕ ಟ್ಯಾಂಕ್ ಕ್ಯೂರಿಂಗ್ ಮಾಡದೆ ಅನುದಾನ ಸಂಪೂರ್ಣ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು. ಈ ಬೃಹತ್ ಗಾತ್ರದ ನೀರಿನ ಟ್ಯಾಂಕ್ ಸಂಪರ್ಕ ಹೊಂದಿರುವ ಪೈಪ್ ಗಳು ಹೊಡೆದ ಪರಿಣಾಮ ನೀರು ಸೋರಿಕೆಯಾಗಿ ಸಾರ್ವಜನಿಕರಿಗೆ ಕುಡಿಯುವ ನೀರಿಲ್ಲದೆ ಪರದಾಡುವಂತಹ ಸ್ಥಿತಿ ನಿರ್ಮಾಣಗೊಂಡಿದೆ. ಬೇಸಿಗೆ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ಸಚಿವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕಳಪೆ ಮಟ್ಟದಿಂದ ನಿರ್ಮಿಸಿದ ಅಧಿಕಾರಿಗಳ ವಿರುದ್ದ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ರಘು, ಭರತ್, ರಾಜೇಶ್, ವೆಂಕಟೇಶ ಸೇರಿದಂತೆ ಉಪಸ್ಥಿತರಿದ್ದರು.

56 ಸಾವಿರ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಪ್ರತಿಭಟನೆ

ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು ಹಾಗೂ ಪಾರದರ್ಶಕ ನೇಮಕಾತಿಗಾಗಿ ಕೆ.ಪಿ.ಎಸ್.ಸಿ. ಸಂಪೂರ್ಣವಾಗಿ ಸ್ವಚ್ಛಗೊಳಿಸಲು ಪಿ.ಸಿ. ಹೋಟಾ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಕೂಡಲೇ ಭರ್ತಿಮಾಡಬೇಕು. ಈ ಪ್ರತಿಭಟನೆಯ ನೇತೃತ್ವವನ್ನು ಹೋರಾಟ ಸಮಿತಿಯ ರಾಜ್ಯ ಸಹ ಸಂಚಾಲಕರಾದ ಚನ್ನಬಸವ ಜಾನೇಕಲ್, ಜಿಲ್ಲಾ ಸಂಘಟನಾಕಾರರಾದ ಶಿವಪ್ಪ ಬಸ್ಕಿಹಾಳ, ವಿನೋದ್ ಕುಮಾರ್, ಸಂತೋಷ್ ಸಾಗರ್, ಅಭಿಲಾಶ್ ವಹಿಸಿದ್ದರು. ಪ್ರತಿಭಟನೆಯಲ್ಲಿ ಉದ್ಯೋಗ ಆಕಾಂಕ್ಷಿಗಳಾದ ಶರಣಬಸವ, ರವಿ ಆತ್ಕೂರ್, ಸುದೀಪ್, ನರಸಪ್ಪ, ಭೀಮರೆಡ್ಡಿ, ಶಿವರಾಜ್, ಉದಯ್ ಕಿರಣ್, , ನವೀನ್ ಕುಮಾರ್, ವೆಂಕಟೇಶ್ ಯರಮರಸ್, ವೆಂಕಟೇಶ್, ವಿನಯ್ ಕುಮಾರ್, ನಾಗರಾಜ್, ನರೇಂದ್ರ, ಟಿ. ರಾಥೋಡ್, ಸರೋಜಾ ಮುಂತಾದವರು ಭಾಗವಹಿಸಿದ್ದರು.

ಬೀದಿ ವ್ಯಾಪಾರಿಗಳ ಹಕ್ಕುಗಳ ಜೀವನೋಪಾಯ ರಕ್ಷಿಸಲು ಒತ್ತಾಯ

ತೆರವು ಅಥವಾ ಸ್ಥಳಾಂತರ ಮಾಡಬಾರದು.

ಯಾವುದೇ ತೆರವುಗೊಳಿಸುವ ಮೊದಲು ವ್ಯಾಪಾರಿಗಳಿಗೆ ನಿಗದಿತ ವ್ಯಾಪಾರ ವಲಯಗಳು ಅಥವಾ ಪರ್ಯಾಯ ವ್ಯವಸ್ಥೆಗಳನ್ನು ಒದಗಿಸಬೇಕು.

ನಗರಸಭೆಯ ಪ್ರಸ್ತುತ ಕ್ರಮಗಳು ಮೇಲ್ಕಂಡ ಕಾನೂನು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿವೆ.

ನಮ್ಮ ಬೇಡಿಕೆಗಳು:ಮೇಲ್ಕಂಡ ವಿಷಯಗಳ ಆಧಾರದಲ್ಲಿ, ನಾವು ಅಧಿಕಾರಿಗಳಿಂದ ಕೆಳಕಂಡ ಕ್ರಮಗಳನ್ನು ತಕ್ಷಣ ಕೈಗೊಳ್ಳುವಂತೆ ಬಲವಾಗಿ ಆಗ್ರಹಿಸುತ್ತೇವೆ:

1. ಸಿಂಧನೂರಿನಲ್ಲಿ ಬೀದಿ ವ್ಯಾಪಾರಿಗಳ ಮೇಲೆ ನಡೆಯುತ್ತಿರುವ ಎಲ್ಲಾ ತೆರವು ಕ್ರಮಗಳನ್ನು ತಕ್ಷಣ ನಿಲ್ಲಿಸಬೇಕು.
2. ಕಾಯ್ದೆಯ ಪ್ರಕಾರ ಬೀದಿ ವ್ಯಾಪಾರಿಗಳ ಸಮರ್ಪಕ ಪ್ರತಿನಿಧಿತ್ವದೊಂದಿಗೆ ಟೌನ್ ವೆಂಡಿಂಗ್ ಸಮಿತಿ () ರಚಿಸಬೇಕು.
3. ಎಲ್ಲಾ ಬೀದಿ ವ್ಯಾಪಾರಿಗಳ ಸಮಗ್ರ ಸಮೀಕ್ಷೆ ನಡೆಸಬೇಕು. ಅರ್ಹ ವ್ಯಾಪಾರಿಗಳಿಗೆ ವ್ಯಾಪಾರ ಪ್ರಮಾಣಪತ್ರ ಹಾಗೂ ಗುರುತಿನ ಚೀಟಿಗಳನ್ನು ನೀಡಬೇಕು.
4. ತೆರವುಗೊಳಿಸಲ್ಪಟ್ಟ ಎಲ್ಲಾ ವ್ಯಾಪಾರಿಗಳಿಗೆ ತಮ್ಮ ಮೂಲ ಸ್ಥಳಗಳಲ್ಲಿ ಅಥವಾ ಸೂಕ್ತ ಪರ್ಯಾಯ ಸ್ಥಳಗಳಲ್ಲಿ ವ್ಯಾಪಾರ ಪುನರಾರಂಭಿಸಲು ಅವಕಾಶ ನೀಡಬೇಕು. ನಗರಸಭೆ ಮತ್ತು ಪೊಲೀಸರ ಹಿಂಸಾಚಾರದಿಂದ ರಕ್ಷಣೆ ಒದಗಿಸಬೇಕು.

ಬೀದಿ ವ್ಯಾಪಾರವು ಸಾವಿರಾರು ಬಡ ಕುಟುಂಬಗಳ ಪ್ರಮುಖ ಜೀವನೋಪಾಯವಾಗಿದೆ. ಕಾನೂನು ಪ್ರಕ್ರಿಯೆಗಳನ್ನು ಅನುಸರಿಸದೆ ತೆಗೆದುಕೊಳ್ಳುವ ಯಾವುದೇ ಕ್ರಮವು ಭಾರತದ ಸಂವಿಧಾನದ ವಿಧಿ 21 ಅಡಿಯಲ್ಲಿ ಖಚಿತಪಡಿಸಿರುವ ಜೀವನೋಪಾಯದ ಹಕ್ಕಿನ ಉಲ್ಲಂಘನೆಯಾಗಿದೆ.

ಆದ್ದರಿಂದ, ಸಿಂಧನೂರಿನ ಬೀದಿ ವ್ಯಾಪಾರಿಗಳ ಹಕ್ಕುಗಳು ಮತ್ತು ಜೀವನೋಪಾಯವನ್ನು ರಕ್ಷಿಸಲು ತಕ್ಷಣ ಸೂಕ್ತ ಕ್ರಮ ಕೈಗೊಳ್ಳುವಂತೆ ವಿನಂತಿಸುತ್ತೇವೆ ಎಂದು ಆರ್. ಮಾನಸಯ್ಯ ಪ್ರಧಾನ ಕಾರ್ಯದರ್ಶಿಟ್ರೇಡ್ ಯೂನಿಯನ್ ಸೆಂಟರ್ ಆಫ್ ಇಂಡಿಯಾ ರಾಯಚೂರು ಅವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದರು

ಸಿಎಂ ನಿವಾಸ ಮುಂದೆ ಪ್ರತಿಭಟನೆ ಎಚ್ಚರಿಕೆ

ಎಂದು ಆರೋಪಿಸಿದರು. ತಕ್ಷಣವೇ ಸರ್ಕಾರವು ಈ ಪ್ರಕರಣವನ್ನು ಸಿ ಐ ಡಿ ಅಥವಾ ಇ ಡಿ ಗೆ ವಹಿಸಬೇಕು ಎಂದು ಒತ್ತಾಯಿಸಿದರು.2024ರ ಅಕ್ಟೋಬರ್‌ನಲ್ಲಿ ಈ ವಿಷಯವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದ್ದು, ಬಳಿಕ ಸರ್ಕಾರವು ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿತ್ತು. ಆದರೆ ಎರಡು ವರ್ಷಗಳಾದರೂ ತನಿಖೆಯಲ್ಲಿ ಯಾವುದೇ ಸ್ಪಷ್ಟ ಪ್ರಗತಿ ಕಾಣಿಸದಿರುವುದು ಸಾರ್ವಜನಿಕರಲ್ಲಿ ನ್ಯಾಯವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಕುಂದಿಸಿದೆ ಎಂದು ಅವರು ಹೇಳಿದರು. ನ್ಯಾಯಕ್ಕಾಗಿ ಹೂಡಿಕೆದಾರರು ಸ್ವತಃ ಹೋರಾಟಕ್ಕೆ ಇಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ.2026ರ ಫೆಬ್ರವರಿ 17ರಂದು ಸಂರೀನ್ ಬೇಗಂ ಅವರು ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ, ಫೆಬ್ರವರಿ 27ರಂದು ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಸಂಖ್ಯೆ 16/2026 ದಾಖಲಾಗಿದೆ. ಈ ಪ್ರಕರಣದಲ್ಲಿ ಒಟ್ಟು 15 ಆರೋಪಿಗಳನ್ನು ಸೇರಿಸಲಾಗಿದೆ.ಇದರ ನಡುವೆ, 15ನೇ ಆರೋಪಿ ಸಿರಾಜ್ ಅಹ್ಮದ್ ಜಾಫರಿ ಅವರು ತಮ್ಮ ವಿರುದ್ಧದ ಎಫ್‌ಐಆರ್ ರದ್ದುಪಡಿಸುವಂತೆ ಕರ್ನಾಟಕ ಹೈಕೋರ್ಟ್ ಕಲಬುರಗಿ ಪೀಠಕ್ಕೆ ಅರ್ಜಿ ಸಲ್ಲಿಸಿದ್ದರು. ಆದರೆ ನ್ಯಾಯಾಲಯವು ಪ್ರಕರಣಕ್ಕೆ ಮೇಲ್ನೋಟಕ್ಕೆ ಸಾಕಷ್ಟು ಆಧಾರವಿದೆ ಎಂದು ಹೇಳಿ ಅರ್ಜಿಯನ್ನು ತಿರಸ್ಕರಿಸಿ ತನಿಖೆಯನ್ನು ಮುಂದುವರಿಸಲು ಆದೇಶ ನೀಡಿದೆ.ಇಷ್ಟಾದರೂ ಪ್ರಮುಖ ಆರೋಪಿಗಳನ್ನು ಬಂಧಿಸದಿರುವುದು ಸಾರ್ವಜನಿಕರಲ್ಲಿ ತೀವ್ರ ಅಸಮಾಧಾನ ಹುಟ್ಟಿಸಿದೆ. ತನಿಖಾಧಿಕಾರಿಗಳ ನಿಧಾನಗತಿಯು ಅನುಮಾನಗಳಿಗೆ ಕಾರಣವಾಗಿದೆ. ಹೂಡಿಕೆದಾರರು ತಮ್ಮ ಜೀವನಪೂರ್ಣ ಉಳಿತಾಯ ಕಳೆದುಕೊಂಡು ಆರ್ಥಿಕ ಹಾಗೂ ಮಾನಸಿಕ ಸಂಕಷ್ಟ ಅನುಭವಿಸುತ್ತಿದ್ದಾರೆ.ಈ ಹಿನ್ನೆಲೆ ಹೂಡಿಕೆದಾರರು ಸರ್ಕಾರದ ಮುಂದೆ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟಿದ್ದು, ಆರೋಪಿಗಳ ವಿರುದ್ಧ ನೀಡಿರುವ ಸ್ಟೇ ಆದೇಶಗಳನ್ನು ರದ್ದುಪಡಿಸುವುದು, ಎಲ್ಲ ಆರೋಪಿಗಳನ್ನು ಶೀಘ್ರ ಬಂಧಿಸುವುದು, ಹೂಡಿಕೆದಾರರ ಹಣವನ್ನು ಕಾನೂನು ಪ್ರಕ್ರಿಯೆಯ ಮೂಲಕ ಮರಳಿ ಪಡೆಯಿಸುವುದು ಹಾಗೂ ತನಿಖೆಯಲ್ಲಿ ವಿಳಂಬ ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.ಈ ಬೇಡಿಕೆಗಳನ್ನು ತಕ್ಷಣ ಜಾರಿಗೆ ತರದಿದ್ದರೆ ಮುಖ್ಯಮಂತ್ರಿಗಳ ನಿವಾಸದ ಮುಂದೆ ಶಾಂತಿಯುತ ಧರಣಿ ಹಾಗೂ ಭಾರೀ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಸಿಐಡಿ ತನಿಖೆ ವಿಫಲವಾದಲ್ಲಿ ಪ್ರಕರಣವನ್ನು ಸಿಬಿಐ ಮತ್ತು ಇಡಿ ತನಿಖೆಗೆ ಕೇಂದ್ರ ತನಿಖಾ ಸಂಸ್ಥೆಗಳಿಗೆ ವರ್ಗಾಯಿಸುವಂತೆ ಕೂಡ ಆಗ್ರಹಿಸಿದ್ದಾರೆ.ಇದು ಕೇವಲ ಹಣದ ವಿಷಯವಲ್ಲ; ಇದು ನ್ಯಾಯ, ವಿಶ್ವಾಸ ಮತ್ತು ಸಾಮಾನ್ಯ ಜನರ ಬದುಕಿನ ಪ್ರಶ್ನೆ. ನಾವು ಕೇಳುತ್ತಿರುವುದು ಸಹಾನುಭೂತಿ ಅಲ್ಲ, ನ್ಯಾಯ,'' ಎಂದು ಹೂಡಿಕೆದಾರರು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು

ನ್ಯಾಯ ಸಿಗುವವರೆಗೆ ಹೋರಾಟ ನಿಲ್ಲುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸುಲ್ತಾನ್, ಮಸೂದ್ ಅಲಿ, ಶೇಖ್ ಸೋಹೇಲ್, ನಸಿರುದ್ದಿನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

1.5 ಕೋಟಿ ರೂ ವೆಚ್ಚದಲ್ಲಿ ಸೋಮವಾರಪೇಟೆ ಹಿರೇಮಠದ ಶಿಲಾ ಮಂಟಪ ನಿರ್ಮಾಣ

ಶಾಸಕರಾದ ಎ. ಪಾಪಾರೆಡ್ಡಿಯವರ ಗಮನಕ್ಕೆ ತಂದಾಗ ಅವರು ಆಯ್ತು ಬುದ್ದಿ ಎಂದು ಎರಡನೇ ಮಾತನ್ನೂ ಆಡದೇ ನಾವು ಗಮನಕ್ಕೆ ತಂದ ಮರುದಿನವೇ ಶ್ರೀಮಠಕ್ಕೆ ಕುಟುಂಬ ಸಹಿತರಾಗಿ ಆಗಮಿಸಿ 10ಲಕ್ಷ ರೂ. ನಗದು ಹಣವನ್ನು ನಮಗೆ ಸಲ್ಲಿಸಿದರು ಶಿಲಾ ಮಂಟಪದ ಮುಂಚುಣಿಯ ದಾನಿಗಳು ಅಂದರೂ ತಪ್ಪಾಗಲಾರದು ವೆಂಕಟಾಪೂರ ಷಣ್ಮುಖಪ್ಪ, ನಗರ ಶಾಸಕರಾದ ಡಾ. ಶಿವರಾಜ ಪಾಟೀಲರು, ಕಡಗೋಲ ಆಂಜನೇಯ್ಯ, ಗದ್ವಾಲ ನರಸಣ್ಣ, ಅಂತರಗಂಗಿ ವೀರಭದ್ರಪ್ಪ, ದೋತರಬಂಡಿ ಮಲ್ಲಿಕಾರ್ಜುನ, ಪ್ರಭು ಶಾಸ್ತ್ರಿ, ದೋತರಬಂಡಿ ಶರಣಬಸವ ಹೀಗೇ ಶ್ರೀಮಠದ ಸರ್ವ ಸದ್ಭಕ್ತರು ಸಲ್ಲಿಸಿದ ಭಕ್ತಿ ಸೇವೆಯಿಂದ ಈ ಶಿಲಾ ಮಂಟಪದ ಕಾಮಗಾರಿ ಬರದಿಂದಿ ಜರುಗುತ್ತಿದೆ, ಸುಮಾರು ಒಂದುವರೆ ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿತ್ತಿರುವ ಈ ಶಿಲಾ ಮಂಟಪವು ಯುಗ ಯುಗಗಳವರೆಗೆ ಶ್ರೀಮಠದ ಇತಿಹಾಸವನ್ನು ಬರೆಯಲಿದೆ ಎಂದು ನುಡಿದರು.

ವಡ್ಡೆಪಲ್ಲಿ ಮಂಡಲದ ಕೊಂಕಲ ಗ್ರಾಮದ ವರದರಾಜುರವರ ಸುಮಾರು ಹತ್ತು ಜನರ ತಂಡದವರಿಂದ ಶಿಲಾ ಮಂಟಪ ಜೋಡಣೆ ಕಾಮಗಾರಿ ಜರುತ್ತಿದೆ.

ಈ ಸಂದರ್ಭದಲ್ಲಿ ಗದ್ವಾಲ ಡಾ. ನಾಗರಾಜ, ದೋತರಬಂಡಿ ಸೋಮಶೇಖರಪ್ಪ, ದೋತರಬಂಡಿ ಶರಣಪ್ಪ ಜವಳಿ, ಶರಣಪ್ಪ ಗೋನಾಳ, ಸಿದ್ದನಗೌಡ, ವಿಜಯಕುಮಾರ ಸಜ್ಜನ್, ಅತ್ತನೂರ ನಾಗನಗೌಡ, ನೀಲಕಂಠಪ್ಪ ದಿನ್ನಿ, ಸೌದ್ರಿ ವಿಶ್ವನಾಥ, ರಾಚಯ್ಯ ಸ್ವಾಮಿ ನಂದಿಕೋಲಮಠ, ಕುಂಬಾರ ಪಂಪಣ್ಣ ಹಾಗೂ ಶ್ರೀಮಠದ ಸರ್ವ ಶಿಷ್ಯ ವೃಂಧದವರು ಉಪಸ್ಥಿತರಿದ್ದರು.

ಕೆ ಪಿ ಎಸ್ ಸಿ ಸುಧಾರಣೆ ಸದನ ಸಮಿತಿಗೆ. ಶಾಸಕ ಹಂಪನಗೌಡ ಬಾದರ್ಲಿ ನೇಮಕ.

ಸಮಿತಿಯನ್ನು ರಚಿಸಿದೆ. ಈ ಉನ್ನತ ಮಟ್ಟದ ಸಮಿತಿಯ ಸದಸ್ಯರನ್ನಾಗಿ. ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ ಅವರನ್ನು. ನೇಮಕ ಮಾಡಲಾಗಿದೆ. ಆಯೋಗದಲ್ಲಿ ಪಾರದರ್ಶಕತೆ ತರುವುದು ಮತ್ತು ಕೆಪಿಎಸ್ಸಿ ಅಭ್ಯರ್ಥಿಗಳಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವ ನಿಟ್ಟಿನಲ್ಲಿ ಈ ಸಮಿತಿಯು ಮಹತ್ವದ ಸಲಹೆಗಳನ್ನು ನೀಡಲಿದೆ. ಕೆಪಿಎಸ್ಸಿ ಪರೀಕ್ಷೆಗಳಲ್ಲಿ ಪದೇ ಪದೇ ಎದುರಾಗುತ್ತಿರುವ ಗೊಂದಲಗಳಿಂದ ಕಂಗೆಟ್ಟಿದ್ದ ಆಕಾಂಕ್ಷಿಗಳಿಗೆ ಈ ಸಮಿತಿಯ ರಚನೆ ಇಂದ ಹೊಸ ಆಶಾಕಿರಣ ಮೂಡಿಸಿದೆ. ಪಂಪನಗೌಡ ಬಾದರ್ಲಿ ಅವರಂತಹ ಹಿರಿಯ ನಾಯಕರ ಉಪಸ್ಥಿತಿಯಲ್ಲಿ ಆಯೋಗದ ಕಾರ್ಯಕಲಾಪಗಳಲ್ಲಿ. ಕ್ರಾಂತಿಕಾರಕ ಬದಲಾವಣೆಗಳನ್ನು ತರಲು ಸಹಾಯಕವಾಗುತ್ತದೆ ಎಂಬ ವಿಶ್ವಾಸ ಸಾರ್ವಜನಿಕ ವಲಯದಲ್ಲಿ ಕಂಡು ಬಂದಿದೆ.

ಗೃಹಲಕ್ಷ್ಮಿ ಹಣ ವಿಳಂಬಕ್ಕೆ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ

ಅಧಿಕಾರಿಗಳು ಮಾಹಿತಿ ನೀಡಿದರು. ಜಿಲ್ಲೆಯಲ್ಲಿ 16 ಬಸ್‌ಗಳಿದ್ದರೂ 143 ಚಾಲಕ-ನಿರ್ವಾಹಕರ ಹುದ್ದೆಗಳು ಖಾಲಿ ಇವೆ ಎಂದು ತಿಳಿಸಲಾ ಯಿತು. ಲಿಂಗಸುಗೂರು ಬಸ್ ನಿಲ್ದಾಣದಲ್ಲಿ ಮಹಿಳಾ ಶೌಚಾಲ ಯದ ಮಾರ್ಗದಲ್ಲಿ ಬೆಳಕಿನ ಕೊರತೆ ಸರಿಪಡಿಸಿ ಎಲ್‌ಇಡಿ ದೀಪ ಅಳವಡಿಸಲು ಸೂಚಿಸಿದರು.

ಗೃಹಲಕ್ಷ್ಮಿ, ಅನ್ನಭಾಗ್ಯ, ಶಕ್ತಿ, ಯುವನಿಧಿ ಹಾಗೂ ಗೃಹಜ್ಯೋತಿ ಯೋಜನೆಗಳ ಪ್ರಗತಿ ಪರಿಶೀಲಿಸಿ, ಬಾಕಿ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

ಎಸ್‌ಎಸ್‌ಎಲ್‌ಸಿಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಅಭಿನಂದನಾ ಸಮಾರಂಭ

ಉತ್ತೀರ್ಣರಾದ ವಿದ್ಯಾರ್ಥಿಗಳಂತೆ ಅನುತ್ತೀರ್ಣರಾದ ವಿದ್ಯಾರ್ಥಿಗಳ ಬಗ್ಗೆಯೂ ವಿಶೇಷ ನಿಗಾ ವಹಿಸಿ-ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ

ಯಾದಗಿರಿ ,ಮೇ.07-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ 2025-26 ನೇ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ-1 ರಲ್ಲಿ ಪ್ರತಿಶತ ಫಲಿತಾಂಶ ಪಡೆದ ಶಾಲೆಗಳ ಶಿಕ್ಷಕರು ಹಾಗೂ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭವನ್ನು ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಇಂದು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು, ಈ ಪರೀಕ್ಷೆಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ ಅವರು ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನೂ ಗುರುತಿಸಿ, ತರಬೇತಿಗೊಳಿಸಿ ಮುಂದೆ ಸಾಧನೆ ಮಾಡುವಂತೆ ಪ್ರೇರೇಪಿಸಲು ಹಾಗೂ ಮುಂದಿನ ವರ್ಷ ಜಿಲ್ಲೆಯಾದ್ಯಂತ ಶೇ.ನೂರು ರಷ್ಟು ಫಲಿತಾಂಶ ತರಲು ಪ್ರಯತ್ನಿಸುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಮತ್ತು ಶಿಕ್ಷಕರಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ



ಜಿಲ್ಲಾಧಿ ಕಾರಿ ಹರ್ಷಲ್ ಭೋಯರ್ ಅವರು, ಈ ವರ್ಷ ಜಿಲ್ಲೆಗೆ ಹರ್ಷ ತಂದಿದೆ.ನಾಲ್ವರು ಯುಪಿಎಸ್ಸಿ ಯಲ್ಲಿ ಯಶಸ್ವಿಯಾಗಿರುವುದು ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲೆಯ 86 ಶಾಲೆಗಳು ಶೇ. ನೂರರಷ್ಟು ಫಲಿತಾಂಶ ತಂದಿರುವುದಕ್ಕೆ ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಣ ಇಲಾಖೆ ಅಧಿಕಾರಿ ಸಿಬ್ಬಂದಿಗಳ ತಂಡಕ್ಕೆ ಅಭಿನಂದಿಸಿದರು. ಶಿಕ್ಷಣ ಸಚಿವರು ಸಹ ಜಿಲ್ಲೆಯ ಸಾಧನೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದು, ಮುಂದಿನ ವರ್ಷ ಗಳಲ್ಲಿ ಎಲ್ಲಾ ಶಾಲೆಗಳಲ್ಲಿ ಪ್ರತಿಶತ ನೂರರಷ್ಟು ಫಲಿತಾಂಶ ತರಲು ಪ್ರಯತ್ನಿಸಬೇಕು ಎಂದು ಹೇಳಿ ದರು.

ವಿದ್ಯಾರ್ಥಿಗಳು ಭವಿಷ್ಯತ್ತಿನ ಸವಾಲುಗಳನ್ನು ಮೆಟ್ಟಿನಿಲ್ಲುವ ದಿಸೆಯಲ್ಲಿ ಅವರನ್ನು ಸನ್ನದ್ಧಗೊಳಿಸಬೇಕು. ಉದ್ಯೋಗವನ್ನು ಸಕಾಲಕ್ಕೆ ಅವರು ಪಡೆಯಲು ಅನುಕೂಲವಾಗುವಂತೆ, ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಇಂದು ತಾಂತ್ರಿಕ ಕೌಶಲ್ಯ ಹೆಚ್ಚಿಸುವ ಕಾರ್ಯ ಪರಿಣಾಮಕಾರಿಯಾಗಿ ಆಗಬೇಕು. ಇಂಟರ್ನೆಟ್ ಕ್ರಾಂತಿಕಾರಿ ಮತ್ತು ಸದೃಢ ಟೂಲ್ ಆಗಿರುವುದರಿಂದ ಶಿಕ್ಷಕರು ತಮ್ಮನ್ನು ತಾವು ಅಪ್ಗ್ರೇಡ್ ಮಾಡಿಕೊಳ್ಳುವ ಜೊತೆಗೆ ಆಸಕ್ತ ವಿದ್ಯಾರ್ಥಿಗಳ ತಾಂತ್ರಿಕ ಕೌಶಲ್ಯತೆ ಹೆಚ್ಚಿಸಲು ಪ್ರಯತ್ನಿಸಬೇಕು. ಮೊಬೈಲ್ ಆ್ಯಪ್‌ಗಳು ಮತ್ತು ಅಂತರ್ಜಾಲ ವ್ಯವಸ್ಥೆಗಳ ಸದ್ಬಳಕೆಗೆ ಅವರ ಕೌಶಲ್ಯತೆಗೆ ತಕ್ಕಂತೆ ಸಶಕ್ತಗೊಳಿಸಬೇಕು ಎಂದು ಅವರು ಹೇಳಿದರು.

ವಿದ್ಯಾರ್ಥಿಗಳು ಜಾಗತಿಕ ಮಟ್ಟದ ಸ್ಪರ್ಧೆ ಎದುರಿಸಲು ಸಶಕ್ತರಾಗಿರುವದರಿಂದ ಅವರ ಭವಿಷ್ಯದ ಹಿತದೃಷ್ಟಿಯಿಂದ ದೂರದೃಷ್ಟಿ ಯುಳ್ಳ ಯೋಜನೆಗಳನ್ನು ರೂಪಿ ಸಲು ಅವರು ಸಲಹೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ ಅವರು, ಈ ಬಾರಿಯ ಪರೀಕ್ಷೆಯಲ್ಲಿ ಶೇ 91.8 ರಷ್ಟು ಪಾಸಿಂಗ್ ಫಲಿತಾಂಶ ಬಂದಿದೆ. ಕಳೆದ ಬಾರಿ ಫಲಿತಾಂಶದಲ್ಲಿ ಕೊನೆಯಲ್ಲಿದ್ದ ಈ ಜಿಲ್ಲೆ ಈ ಬಾರಿ ರ್ಯಾಂಕಿಂಗ್ ಸ್ಥಾನದಲ್ಲಿ ಸುಧಾರಣೆ ಕಂಡುಕೊಂಡಿದೆ. ಶಿಕ್ಷಣ ಸಚಿವರು ಸಹ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಡಿಡಿಪಿಐ ಚನ್ನಬಸಪ್ಪ ಮುಧೋಳ ಅವರ ಅವಿರತ ಪರಿಶ್ರಮದ ಬಗ್ಗೆ ಪ್ರಶಂಸಿಸಿದ ಅವರು, ಸಮಾಜದಲ್ಲಿ

ಅನುತ್ತೀರ್ಣರಾದ ವಿದ್ಯಾರ್ಥಿನಿಯರಿಗೆ ಬಾಲ್ಯ ವಿವಾಹದಂತಹ ಶಿಕ್ಷೆ ಹಾಗೂ ವಿದ್ಯಾರ್ಥಿಗಳಿಗೆ ಅನೈತಿಕ ಚಟುವಟಿಕೆಗಳಲ್ಲಿ ತೊಡ ಗಲು ಕಾರಣವಾಗುವುದರಿಂದ, ಇಂತಹ ವಿದ್ಯಾರ್ಥಿಗಳ ಬಗ್ಗೆಯೂ ವಿಶೇಷ ನಿಗಾ ವಹಿಸಿ,ಅವರಿಗೆ ಪ್ರೋತ್ಸಾಹಿಸುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಅವರು ಸೂಚಿ ಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಅವರು, ಜಿಲ್ಲೆಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಬದಲಾವಣೆ ಆಗುತ್ತಿದೆ. ಈ ಜಿಲ್ಲೆಯಲ್ಲಿ ಖಾಸಗಿ ಶಾಲೆಗಳ ಪ್ರಮಾಣ ಕಡಿಮೆ ಇದ್ದರೂ ವಿದ್ಯಾರ್ಥಿಗಳು ಅಭೂತಪೂರ್ವ ಸಾಧನೆ ಮಾಡಿದ್ದಾರೆ. ಜಿಲ್ಲೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ. ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನಕ್ಕೆ ಅನುಗುಣವಾಗಿ ಅವರ ಭವಿಷ್ಯ ರೂಪಿಸುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಅಶೋಕ ಕೆಂಭಾವಿ ಮಾತನಾಡಿದರು. ಡಿಡಿಪಿಐ ಚನ್ನಬಸಪ್ಪ ಮುಧೋಳ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಚನ್ನ ಬಸಪ್ಪ ಉಪಸ್ಥಿತರಿದ್ದರು. ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ ಗಳಿಗೆ, ಶೇ ನೂರು ರಷ್ಟು ಫಲಿತಾಂಶ ತಂದ ಮುಖ್ಯ ಶಿಕ್ಷಕರಿಗೆ , ಅತಿಥಿ ಶಿಕ್ಷಕರಿಗೆ ಸನ್ಮಾನಿಸಲಾಯಿತು. ಜಿಲ್ಲಾ ನೋಡಲ್ ಅಧಿಕಾರಿ ಹನು ಮಂತ ಅವರು ಸ್ವಾಗತಿಸಿದರು. ಕಿಶನ್ ಪವಾರ್ ಕಾರ್ಯಕ್ರಮ ನಿರೂಪಿಸಿದರು. ಸಂಗೀತಾ ಪ್ರಾರ್ಥಿಸಿದರು.

ಬೇಸಿಗೆ ಶಿಬಿರ ಸಮಾರೋಪ ಸಮಾರಂಭದಲ್ಲಿ ಹಾಸ್ಯ ಕಲಾವಿದ ಬಸವರಾಜ ಮಹಾಮನಿ ಭಾಗಿ



ಯಾದಗಿರಿ,ಮೇ.07-

ರಾಜ್ಯ ಬಾಲ ಭವನ ಸೊಸೈಟಿ, ಬೆಂಗಳೂರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲ ಭವನ ಯಾದಗಿರಿ ವತಿಯಿಂದ ಜಿಲ್ಲೆಯಲ್ಲಿ 05-16 ವರ್ಷದ ಮಕ್ಕಳಿಗೆ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆ ಗಳಾದ ಚಿತ್ರಕಲೆ, ಕರಕುಶಲ, ನಾಟಕ, ನೃತ್ಯ, ಯೋಗ, ಕರಾಟೆ, ಮಲ್ಲಕಂಭ, ಪ್ರಕೃತಿ ಪರಿಸರ, ಓದುವ ಕೌಶಲ್ಯ ಕುರಿತು 15ದಿನದ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ದಿನಾಂಕ: 06.05.2026 ರಂದು ಜಿಲ್ಲಾ ಬಾಲ ಭವನ ಸಭಾಂಗಣ ಯಾದಗಿರಿಯಲ್ಲಿ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮಕ್ಕೆ ಉದ್ಘಾಟ ಕರಾಗಿ ಆಗಮಿಸಿದಂತಹ ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶ್ರೀ ತಿಪ್ಪಣ್ಣ ಸಿರಸಗಿರವರು ಮಾತನಾಡಿ, ಸಮಾಜದಲ್ಲಿ ಉನ್ನತ ಶ್ರೇಣಿಗೆ ತಲುಪಬೇಕಾದರೆ ವಿದ್ಯಾಭ್ಯಾಸದ ಜೊತೆಗೆ ಸಣ್ಣ ಪುಟ್ಟ ಕಲೆಗಳನ್ನು ಬೆಳಸಿಕೊಳ್ಳಬೇಕು 15ದಿನದ ಬೇಸಿಗೆ ಶಿಬಿರದಲ್ಲಿ ತಾವು ಮಕ್ಕಳಲ್ಲಿ ಸೃಜ ನಾತ್ಮಕ ಚಟುವಟಿಕೆಗಳಾದ ಕರಕು ಶಲೆ, ಚಿತ್ರಕಲೆ, ಜೇಡಿಮಣ್ಣಿನ ಕಲೆ, ಇತರೆ ಚಟುವಟಿಕೆಗಳಲ್ಲಿ ತುಂಬಾ ಅದ್ಭುತವಾಗಿ ಪ್ರದರ್ಶನ ಮಾಡಿ ದ್ದಾರೆ ಕ್ರೀಯಾ ಶೀಲ ಚಟುವಟಿಕೆ ಮೂಲಕ ಕ್ರೀಡೆ ಮತ್ತು ಕಲೆಗಳಲ್ಲಿ ಹೆಚ್ಚಿನ ಅಭ್ಯಾಸ ಬೆಳಸಿಕೊಂಡು ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಭಾಗವಹಿಸಿ ಎಂದು ಮಕ್ಕಳಿಗೆ ತಿಳುವಳಿಕೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ದಂತಹ ಯಾದಗಿರಿ ಜಿಲ್ಲೆ ಹಾಸ್ಯ ಕಲಾವಿದರಾದ ಬಸವರಾಜ ಮಹಾ ಮನಿ ರವರು ಮಾತನಾಡಿ, ಬೇಸಿಗೆ ಯಲ್ಲಿ ಮಕ್ಕಳು 09ತಿಂಗಳು ಬರೇ ಓದು ಓದು ಎಂಬುವುದನ್ನು ಮಕ್ಕಳಿಗೆ ಹೇಳಿಕೊಟ್ಟರೆ ಬಾಲ ಭವನವು ಏರ್ಪಡಿಸುತ್ತಿರುವ ಉಚಿತ ಬೇಸಿಗೆ ಶಿಬಿರವನ್ನು ಜಿಲ್ಲೆಯ ಎಲ್ಲಾ ಮಕ್ಕಳು ಭಾಗವಹಿಸಿದ್ದೀರಿ ಇದು ತುಂಬಾ ನನಗೆ ಸಂತೋಷವಾದ ವಿಷಯ. ಏಕೆಂದರೆ ನನ್ನ ಮಗನು ಕೂಡ ಈ ಒಂದು 15ದಿನದ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ್ದಾನೆ ಅವನಿಗೆ ಮಲ್ಲಕಂಬದಲ್ಲಿ ತುಂಬಾ ಆಸಕ್ತಿ ಯಿಂದ ಕಲಿಯುತ್ತೇನೆ ಎಂದು ಹೇಳುತ್ತಾನೆ. ಹಾಗೆ ಪ್ರತಿಯೊಂದು ಮಗುವಿನಲ್ಲಿ ಕೂಡಾ ತಮ್ಮದೆ ಆದ ಕಲೆ ಇರುತ್ತದೆ ಎಂದರು. ಅದೇ ರೀತಿಯಾಗಿ ಅಗ್ನಿಶಾಮ ಕದಳ ಇಲಾಖೆಯ ಸ್ಟೇಷನ್ ಪೈಯ ರ್ ಆಪೀಸರ್ ವೀರೇಶ ರವರು ಅಗ್ನಿ ಶಾಮಕದಳ ಇಲಾಖೆಯ ಕುರಿತು ಮಕ್ಕಳಿಗೆ ಅಗ್ನಿ ಅವಗಡ ಸಂದರ್ಭ ದಲ್ಲಿ ಹೇಗೆ ನಾವು ಜಾಗೃತಿಯಿಂದ ಮತ್ತು ರಕ್ಷಣೆಯನ್ನು ಮಾಡಿಕೊಳ್ಳಬೇಕುಂಬುದರ ಬಗ್ಗೆ ಜಾಗೃತಿ ಅರಿವು ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃ ದ್ಧಿ ಅಧಿಕಾರಿ ಭೀಮರಾಯ ರವರು ಮಾತನಾಡಿ, ಜಿಲ್ಲೆಯಲ್ಲಿ ಬಾಲ ಭವನದ ವತಿಯಿಂದ ಶಾಲೆಯ ಅವಧಿ ದಿನಗಳಲ್ಲಿ ಪ್ರತಿ ಗ್ರಾಮಗಳಲ್ಲಿ ಮತ್ತು ತಾಲ್ಲೂಕ ಮಟ್ಟದಲ್ಲಿ ಮಕ್ಕಳ ಕಲೆಗಳನ್ನು ಪ್ರದರ್ಶಿಸಲು ವಿವಿಧ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದೆ. ಅದೇರೀತಿಯಾಗಿ ಈ ಒಂದು ರಜೆ ದಿನಗಳಲ್ಲಿ ನಿಮ ಗೆಲ್ಲಾ 15 ದಿನದ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಿ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ 100 ಕಿಂತ ಹೆಚ್ಚು ಮಕ್ಕಳು ಭಾಗ ವಹಿಸಿದ್ದಿರಿ ನಿಮ್ಮೆಲ್ಲರಿಗೂ ಅಭಿನಂ ದನಾ ಪತ್ರವನ್ನು ನೀಡಲಾಗುವುದು ಎಂದು ಹೇಳಿದರು.

ಅಧ್ಯಕ್ಷರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಯಾದಗಿರಿ ದಿನೇಶ್ ಕುಮಾರ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ದೀಪಿಕಾ ಬಿ.ವಿ, ಇತರರು ಭಾಗಿಯಾಗಿದ್ದರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿ ವೇತನ: ಅರ್ಜಿ ಸಲ್ಲಿಕೆಯ ಅವಧಿ ಮೇ 16ರವರೆಗೆ ವಿಸ್ತರಣೆ

ಬಳ್ಳಾರಿ,ಮೇ 07-

2025-26ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ನೀಡಲಾಗುವ ಶುಲ್ಕ ಮರುಪಾವತಿ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಲು ದಿನಾಂಕವನ್ನು ವಿಸ್ತರಿಸಲಾಗಿದೆ.

ಪೋಷಕರು, ವಿದ್ಯಾರ್ಥಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳ ಮನವಿಯ ಮೇರೆಗೆ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ಹಿಂದೆ ನಿಗದಿಪಡಿಸಿದ್ದ ದಿನಾಂಕವನ್ನು ಮೇ 16 ರವರೆಗೆ ವಿಸ್ತರಿಸಲಾಗಿದೆ.

ಅನ್ವಯವಾಗುವ ಕೋರ್ಸ್‌ಗಳು:

ಈ ಸೌಲಭ್ಯವು ಬಿ.ಆರ್ಕ್, ಎಂ.ಸಿ.ಎ, ಎಂ.ಸಿ.ಎಚ್ (ವೈದ್ಯಕೀಯ), ಎಂ.ಡಿ, ಎಂ.ಎಸ್ (ಮಾಸ್ಟರ್ ಆಫ್ ಸರ್ಜರಿ), ಎಂ.ಎಸ್, ಎಂ.ಎಸ್ಸಿ (ಅಲೈಡ್ ಸೈನ್ಸ್ ಸ್), ಎಂ.ಪಿ.ಟಿ (ಫಿಸಿಯೋಥೆರಪಿ), ಎಂ.ಎಚ್.ಎ, ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್, ಎಂ.ಪಿ.ಎಚ್ (ಅಲೈಡ್ ಸೈನ್ಸ್ ಸ್), ಎಂ.ಎಸ್ಸಿ . ನರ್ಸಿಂಗ್, ಎಂ.ಎಸ್ಸಿ , ಎಂ.ಟೆಕ್, ಎಂಬಿಎ, ಎಂಬಿಎ ಫಿನ್‌ಟೆಕ್, ಎಂಬಿಎ (ಲಾಜಿಸ್ಟಿಕ್ ಮ್ಯಾನೇಜ್‌ಮೆಂಟ್), ಎಂಬಿಬಿಎಸ್, ಎಂಎಸ್ ಆಯುರ್ವೇದ ಎಂಡಿ (ಆಯುರ್ವೇದ), ಎಂಡಿ (ಹೋಮ್), ಎಂಡಿಎಸ್, ಪಿಜಿ ಡಿಪ್ಲೊಮಾ ಇನ್ ಡೆಂಟಲ್, ಫಾರ್ಮ್.ಡಿ (ಪೋಸ್ಟ್ ಬ್ಯಾಕಲೌರಿಯೇಟ್), ಎಂ.ಫಾರ್ಮ್, ಬಿ.ಇ, ಬಿ.ಟೆಕ್, ಬಿ.ಎಸ್ಸಿ (ಆನರ್ಸ್), ಬಿ.ವಿ.ಎಸ್ಸಿ ಮತ್ತು ಎಎಚ್, ಬಿಎಎಂಎಸ್ (ಆಯುರ್ವೇದ), ಬಿಎಚ್‌ಎಂಎಸ್ (ಹೋಮಿಯೋಪತಿ), ಬಿಎನ್‌ವೈಎಸ್ (ಯೋಗ ಮತ್ತು ಪ್ರಕೃತಿ ಚಿಕಿತ್ಸೆ), ಬುಲ್ವಿಎಸ್ (ಯುನಾನಿ), ಬಿಎಎಂಎಸ್, ಬಿಡಿಎಸ್, ಎಂ.ಆರ್ಕ್, ಬಿ.ಎಫ್.ಎಸ್ಸಿ , ಬಿ.ಫಾರ್ಮ್, ಫಾರ್ಮ್.ಡಿ, ಬಿ.ಎಸ್ಸಿ (ಅಲೈಡ್ ಸೈನ್ಸ್ ಸ್), ಬಿಪಿಟಿ (ಫಿಸಿಯೋಥೆರಪಿ), ಆಕ್ಯುಪೇಷನಲ್ ಥೆರಪಿಯಲ್ಲಿ ಪದವಿ, ಬಿ.ಡಿ.ಎಸ್. ಬಿ.ಎಸ್ಸಿ .(ನರ್ಸಿಂಗ್), ಬಿ.ಎಸ್ಸಿ (ಪೋಸ್ಟ್ ಈಸಿಕ್), ಬಿ.ಎಡ್, ಬಿ.ಪ್ಲಾನ್, ಡಿಎಂ (ವೈದ್ಯಕೀಯ), ಎಂ.ಫಿಲ್, ಬಿ ಟೆಕ್ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ (ಪೂರ್ಣ ಸ್ಟ್ಯಾಕ್ ಅಭಿವೃದ್ಧಿ), ಬಿ.ಟೆಕ್ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ (ಎಲೆಕ್ಟ್ರಿಕ್ ವೆಹಿಕಲ್ ಟೆಕ್ನಾಲಜಿ), ಪಿ.ಎಚ್‌ಡಿ, ಪ್ಯಾರಾಮೆಡಿಕಲ್ ಕೋರ್ಸ್‌ಗಳು ಮತ್ತು ಎಲ್ಲಾ ಡಿಪ್ಲೋಮಾ ಕೋರ್ಸ್‌ಗಳು ಸೇರಿದಂತೆ ವಿವಿಧ ವೃತ್ತಿಪರ ಮತ್ತು ಪದವಿ/ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತದೆ.


ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಅಥವಾ ತಾಂತ್ರಿಕ ತೊಂದರೆಗಳಿದ್ದಲ್ಲಿ ಇಲಾಖಾ ಸಹಾಯವಾಣಿ ಮೊ.8050770004 ಹಾಗೂ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ ಸಹಾಯವಾಣಿ 1902 ಗೆ ಸಂಪರ್ಕಿಸಬಹುದಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೈಜ್ಞಾನಿಕವಾಗಿ ಘನತ್ಯಾಜ್ಯ ವಿಲೇವಾರಿಗೆ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಸೂಚನೆ

ವಿಜಯನಗರ,ಮೇ.07-

ಜಿಲ್ಲೆಯ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಉತ್ಪತ್ತಿ ಯಾಗುತ್ತಿರುವ ಘನತ್ಯಾಜ್ಯವನ್ನು ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಅತ್ಯಂತ ವೈಜ್ಞಾನಿಕವಾಗಿ ಮತ್ತು ಸಮರ್ಪಕವಾಗಿ ವಿಲೇವಾರಿ ಮಾಡಲು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅವರು ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿಯ ವಿಸಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾ ಡಿದ ಅವರು, ಕಸ ವಿಲೇವಾರಿಯಲ್ಲಿ ನಿರ್ಲಕ್ಷ್ಯ ತೋರುವ ಸಂಸ್ಥೆಗಳ ವಿರು ದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ಯೋಜನೆಯು ಕೇವಲ ಕಸದ ವಿಲೇವಾರಿಯನ್ನಷ್ಟೇ ಗುರಿ ಯಾಗಿಟ್ಟುಕೊಳ್ಳದೆ, ಪರಿಸರ ಸಮತೋಲನ ಕಾಪಾಡಿಕೊಳ್ಳುವುದು ಯೋಜನೆಯ ಉದ್ದೇಶವಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶ ಗಳಲ್ಲಿ ಕಸ ಎಲ್ಲೆಂದರಲ್ಲಿ



ಎಸೆಯದೇ, ಕಸವನ್ನು ಸುಡುವುದಾಗಲಿ ಅಥವಾ ಭೂಮಿಯಲ್ಲಿ ಹೂಳುವುದಾಗಲಿ ಮಾಡದೆ, ವೈಜ್ಞಾನಿಕ ವಿಲೇವಾಡಿ ಮಾಡುವ ಮೂಲಕ ತ್ಯಾಜ್ಯ ಮುಕ್ತ ಪರಿಸರ ನಿರ್ಮಿಸಬೇಕು. ಒಮ್ಮೆ ಬಳಸಿ ಬಿಸಾಡುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಮರುಬಳಕೆಗೆ ನೀಡಬೇಕು. ಹಸಿ ಕಸದಿಂದ ಕಾಂಪೋಸ್ಟ್ ನಂತಹ ಗೊಬ್ಬರ ತಯಾರಿಸಿ ಮಣ್ಣಿನ ಫಲವತ್ತತೆ ಹೆಚ್ಚಿಸುವುದು ಮತ್ತು ಪ್ಲಾಸ್ಟಿಕ್‌ನಂತಹ ವಸ್ತುಗಳನ್ನು ಮರುಬಳಕೆಗೆ ಒಳಪಡಿಸುವುದು ಸೂಕ್ತ ಎಂದರು. ಬೃಹತ್ ತ್ಯಾಜ್ಯ ಉತ್ಪಾದಕರಿಗೆ ಹೊಸ ನಿಯಮ ಅನ್ವಯ ದಿನಕ್ಕೆ 100 ಕೆ.ಜಿಗಿಂತ ಹೆಚ್ಚು ತ್ಯಾಜ್ಯ ಉತ್ಪಾದಿಸುವ ಸಂಸ್ಥೆಗಳು ಅಥವಾ 20,000 ಚದರ ಮೀಟರ್‌ಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಅಪಾರ್ಟ್‌ಮೆಂಟ್ ಮತ್ತು ವಾಣಿಜ್ಯ ಮಳಿಗೆಗಳು ತಮ್ಮ ಆವರಣದಲ್ಲೇ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಹೊಂದುವುದು ಕಡ್ಡಾಯವಾಗಿದೆ. ತಪ್ಪಿದಲ್ಲಿ ಅಂತಹ ಸಂಸ್ಥೆಗಳು ಬೃಹತ್ ತ್ಯಾಜ್ಯ ಉತ್ಪಾದಕ ಜವಾಬ್ದಾರಿ ಪ್ರಮಾಣಪತ್ರ ಪಡೆಯುವುದು ಕಡ್ಡಾಯವಾಗಿದೆ. ಈ ನಿಯಮ ಉಲ್ಲಂಘಿಸಿ ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ಸ್ಥಳದಲ್ಲೇ ದಂಡ ವಿಧಿಸುವ ವ್ಯವಸ್ಥೆ ಜಾರಿಗೆ ತರಲು ಚಿಂತನೆ ನಡೆಸಲಾಗಿದೆ ಎಂದರು.

ತ್ಯಾಜ್ಯ ನಿರ್ವಹಣೆಯು ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಇದು ಸಾರ್ವಜನಿಕರ ಸಹಕಾರವು ಅತ್ಯಗತ್ಯ. ಈ ನಿಟ್ಟಿನಲ್ಲಿ ಮೂಲದಲ್ಲಿಯೇ ಹಸಿ ಕಸ ಮತ್ತು ಒಣ ಕಸವನ್ನು ಮನೆಯಲ್ಲೇ ಪ್ರತ್ಯೇಕಿಸಿ ಕಸ ವಿಲೇವಾರಿ ವಾಹನಗಳಿಗೆ ನೀಡಬೇಕು. ಇದರಿಂದ ಕಾರ್ಮಿಕರ ಶ್ರಮ ಮತ್ತು ಸಮಯ ಎರಡೂ ಉಳಿತಾಯವಾಗಲಿದೆ. ಈ ಕುರಿತು ಅಭಿಯಾನಗಳ ಮೂಲಕ ಸಾರ್ವಜನಿಕರಲ್ಲಿ ತ್ಯಾಜ್ಯ ಎಲ್ಲೆಂದರಲ್ಲಿ ಎಸೆಯದಂತೆ ಜಾಗೃತಿ ಮೂಡಿಸಬೇಕು. ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಕಾರ್ಮಿಕರಿಗೆ ತರಬೇತಿ ಮತ್ತು ಸ್ವ-ಸುರಕ್ಷತಾ ಸಾಧನ ಸಲಕರಣೆ ಒದಗಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ ಅವರು, ಪ್ರತಿ ವರ್ಷ ಜೂನ್ 30ರೊಳಗೆ ತ್ಯಾಜ್ಯ ಸಂಸ್ಕರಣೆಯ ಸಂಪೂರ್ಣ ಮಾಹಿತಿಯನ್ನು ಆನ್‌ಲೈನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.

ಈ ವೇಳೆ ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಮನೋಹರ್, ನಗರಸಭೆ ಪೌರಾಯುಕ್ತ ಶಿವಕುಮಾರ್, ಉಪವಿಭಾಗಾಧಿಕಾರಿ ವಿವೇಕ್, ತಹಶೀಲ್ದಾರ್ ಶೃತಿ.ಎಂ, ಸೇರಿದಂತೆ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಇದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಬಿಎಸ್‌ವೈ ಅಭಿಮಾನೋತ್ಸವ ಮತ್ತು ಬಳಸಿ ಬಿಸಾಡುವ ಬಿಜೆಪಿ ರಾಜಕಾರಣ



ಯಡಿಯೂರಪ್ಪನವರ ಅಭಿಮಾನೋತ್ಸವ ಕೇವಲ ಅಭಿಮಾನಿಗಳ ಸ್ವಯಂಸ್ಫೂರ್ತಿಯ ಸಂಭ್ರಮವಲ್ಲ. ಒಡೆದು ಚೂರಾಗಿರುವ ರಾಜ್ಯ ಬಿಜೆಪಿಯನ್ನು ಒಂದುಗೂಡಿಸಲು, ಲಿಂಗಾಯತ ಸಮುದಾಯವನ್ನು ಬಿಜೆಪಿಯತ್ತ ಮತ್ತೊಮ್ಮೆ ಸೆಳೆಯಲು ಮತ್ತು 2028ರ ಚುನಾವಣೆಗೆ ಮುನ್ನುಡಿ ಬರೆಯಲು ಬಳಸುತ್ತಿರುವ ರಾಜಕೀಯ ವೇದಿಕೆಯಾಗಿ ನೋಡುವುದು ಸರಿ ಎನಿಸುತ್ತದೆ.

ಮೇ 9ರಂದು ಚಿತ್ರದುರ್ಗದಲ್ಲಿ ಬಿಎಸ್‌ವೈ ಅಭಿಮಾನೋತ್ಸವವನ್ನು ರಾಜ್ಯ ಬಿಜೆಪಿ ಹಮ್ಮಿಕೊಂಡಿದೆ. 83ರ ಹರೆಯದ ಭಾರತೀಯ ಜನತಾ ಪಕ್ಷದ ಹಿರಿಯ ನಾಯಕರಾದ ಬಿ.ಎಸ್. ಯಡಿಯೂರಪ್ಪನವರು ಸಾರ್ವಜನಿಕ ಜೀವನಕ್ಕೆ ಅಡಿಯಿಟ್ಟು 50 ವರ್ಷಗಳನ್ನು ಪೂರೈಸಿದ ಈ ಸಂದರ್ಭವನ್ನು ಸ್ಮರಣೀಯಗೊಳಿಸಲು, 10 ಲಕ್ಷಕ್ಕೂ ಹೆಚ್ಚು ಜನ ಸೇರಿಸಲು ಬಿಜೆಪಿ ನಾಯಕರು ಬಿರುಸಿನಿಂದ ಓಡಾಡುತ್ತಿದ್ದಾರೆ. ಭಾರೀ ಪ್ರಚಾರಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ರಾಜಕೀಯದಲ್ಲಿ ಜನಸಂಪರ್ಕ ಅಗತ್ಯ. ನಾಯಕರು ಜನರ ನಡುವೆ ಇರುವುದು ಮುಖ್ಯ. ತಮ್ಮ ವಿಚಾರಧಾರೆ ಮತ್ತು ಕಾರ್ಯಗಳನ್ನು ಜನರಿಗೆ ಮನದಟ್ಟು ಮಾಡಿಸುತ್ತಲೇ; ಅವರ ಕಷ್ಟ-ಸುಖ ಕೇಳಬೇಕು, ಸಮಸ್ಯೆಗಳನ್ನು ಪರಿಹರಿಸಬೇಕು, ಸೇವೆಗೆ ಸಿದ್ಧರಿರಬೇಕು. ಆದರೆ, ಇತ್ತೀಚಿನ ದಿನಗಳ ರಾಜಕಾರಣದಲ್ಲಿ ಜನಸಂಪರ್ಕವೆನ್ನುವುದು ಚುನಾವಣೆಗಳಿಗಷ್ಟೇ ಸೀಮಿತವಾಗಿದೆ. ನಾಯಕರು ಶಕ್ತಿಪ್ರದರ್ಶಿಸಬೇಕೆನಿಸಿದಾಗ ಅದ್ದೂರಿ ಸಮಾವೇಶಗಳ ಮೊರೆ ಹೋಗಲಾಗುತ್ತಿದೆ. ಸಾವಿರಾರು ಕುರ್ಚಿಗಳು, ಭವ್ಯ ವೇದಿಕೆಗಳು, ಹೆಲಿಕಾಪ್ಟರ್‌ಗಳ ಹಾರಾಟ, ನೂರಾರು ವಾಹನಗಳ ಓಡಾಟ, ಮೈಲಿಗಟ್ಟಲೆ ಮೆರವಣಿಗೆ, ಸುದ್ದಿ ಮಾಧ್ಯಮಗಳಲ್ಲಿ ಜಾಹೀರಾತು, ಕಟೌಟ್‌ಗಳು, ಫ್ಲೆಕ್ಸ್ ಗಳು, ಪೋಸ್ಟರ್‌ಗಳು, ಡ್ರೋನ್ ಚಿತ್ರೀಕರಣ- ಎಲ್ಲವೂ ರಾಜಕೀಯದ ಅರ್ಥವನ್ನು ಬದಲಾಯಿಸುತ್ತಿದೆ. ಪ್ರಜೆಗಳೇ ಪ್ರಭುಗಳು ಎಂಬ ಪ್ರಜಾಪ್ರಭುತ್ವದ ಮೂಲ ಆಶಯವನ್ನು ಅಣಕಿಸುವಂತಿದೆ. ಆತಂಕಕಾರಿ ಬೆಳವಣಿಗೆಯಾಗಿ ಬದಲಾಗುತ್ತಿದೆ.

ಜನಪ್ರಿಯ ನಾಯಕನೊಬ್ಬನಿಗೆ ಗೌರವ ಸಲ್ಲಿಸಲು ಕೋಟ್ಯಂತರ ರೂಪಾಯಿ ಖರ್ಚು ಮಾಡಿ, ವೈಭವದ ಸಮಾವೇಶ ಏರ್ಪಡಿಸುವ ಅಗತ್ಯವಿದೆಯೇ? ಅಥವಾ ಇದು ರಾಜಕೀಯ ಶಕ್ತಿಪ್ರದರ್ಶನವೇ? ಅಥವಾ ಮುಂಬರುವ 2028ರ ವಿಧಾನಸಭಾ ಚುನಾವಣೆಗೆ ಬಿಜೆಪಿ ವೇದಿಕೆ ಸಜ್ಜುಗೊಳಿಸಲಾಗುತ್ತಿದೆಯೇ? ಬಿಎಸ್‌ವೈ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಈ ಎಲ್ಲ ಪ್ರಶ್ನೆಗಳು ಮುನ್ನಲೆಗೆ ಬಂದಿವೆ, ಚರ್ಚೆಗೊಳಗಾಗುತ್ತಿವೆ.

ಕರ್ನಾಟಕ ರಾಜಕಾರಣದಲ್ಲಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮಹತ್ವದ ಸ್ಥಾನವಿದೆ. ಸ್ವಂತಶಕ್ತಿಯಿಂದ ಬೆಳೆದ ಜನನಾಯಕ ಎನ್ನುವ ಜನಮನ್ನಣೆಯಿದೆ. ರೈತರ ರಾಜಕಾರಣ, ಲಿಂಗಾಯತ ಸಮುದಾಯದ ಪ್ರಭಾವ, ಸಂಘಟನಾ ಸಾಮರ್ಥ್ಯದಿಂದ ಬಿಜೆಪಿಯನ್ನು ರಾಜ್ಯದಲ್ಲಿ ಕಟ್ಟಿ ಬೆಳೆಸಿದವರು. ಇಂದು ಬಿಜೆಪಿಯ ದೊಡ್ಡ ನಾಯಕರು ಎನಿಸಿಕೊಂಡ ಮೋದಿ ಮತ್ತು ಅಮಿತ್ ಶಾಗಳು ಗುಜರಾತಿನಲ್ಲಿ ರಾಜಕಾರಣ ಕಲಿಯುತ್ತಿದ್ದಾಗಲೇ, ಯಡಿಯೂರಪ್ಪನವರು 2008ರಲ್ಲಿಯೇ ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತಂದವರು. ಅದನ್ನು ಯಾರೂ ನಿರಾಕರಿಸಲು ಸಾಧ್ಯವಿಲ್ಲ.

ಆದರೆ, ಅವರು ಸ್ವಕ್ಷೇತ್ರ ಶಿಕಾರಿಪುರವನ್ನು ಪುತ್ರ ವಿಜಯೇಂದ್ರರಿಗೆ ಬಿಟ್ಟುಕೊಟ್ಟಾಗಲೇ ಸಕ್ರಿಯ ರಾಜಕಾರಣದಿಂದ ನಿರ್ಗಮಿಸಿದ್ದರು. ಅದಕ್ಕಿಂತಲೂ ಮುಖ್ಯವಾಗಿ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನವರನ್ನು, ವಯಸ್ಸಿನ ನೆಪ ಹೇಳಿ, ಸ್ವತಃ ಬಿಜೆಪಿಯ ದೆಹಲಿ ನಾಯಕರಾದ ಮೋದಿ-ಅಮಿತ್ ಶಾ 2021ರಲ್ಲಿ ಸಿಎಂ ಕುರ್ಚಿಯಿಂದ ಅವರನ್ನು ಕೆಳಗಿಳಿಸಿದಾಗಲೇ, ಅವರ ರಾಜಕೀಯ ಜೀವನ ಅಂತ್ಯವಾಗಿತ್ತು. ಅಂದಮೇಲೆ, ಈಗ ಸಾರ್ವಜನಿಕ ಬದುಕಿಗೆ ಬಂದು 50 ವರ್ಷಗಳು ತುಂಬಿದ ನೆಪದಲ್ಲಿ ಜರುಗಲಿರುವ ಉತ್ಸವ ಯಾರಿಗಾಗಿ? ಇದರ ಹಿಂದಿರುವ ಹುನ್ನಾರವೇನು?

ನಾಯಕನೊಬ್ಬನಿಗೆ ಗೌರವ ಸಲ್ಲಿಸುವುದು ತಪ್ಪಲ್ಲ. ಆದರೆ ಆ ಗೌರವ ಸಮಾಜಮುಖಿಯಾಗಿರಬೇಕು. ಜನರೇ ಖುದ್ದು ಆಚರಿಸುವಂತಿರಬೇಕು. ನಾಯಕರ ಜನಪ್ರಿಯತೆಯನ್ನು ಅಳೆಯುವುದು ಅಭಿಮಾನೋತ್ಸವದಿಂದಲ್ಲ, ಜನಜೀವನದಲ್ಲಿ ತಂದ ಬದಲಾವಣೆಯಿಂದ. ದುರದೃಷ್ಟಕ್ಕೆ ಯಡಿಯೂರಪ್ಪನವರನ್ನು ರಾಜಕೀಯವಾಗಿ ಬೆಳೆಸಿದ ಶಿಕಾರಿಪುರ, ಅವರು ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದ 1983ರಲ್ಲಿ ಹೇಗಿತ್ತೋ, ಇವತ್ತು ಕೂಡ ಹಾಗೆಯೇ ಇದೆ. ಇನ್ನು ಯಡಿಯೂರಪ್ಪನವರ ಇಡೀ ಕುಟುಂಬಕ್ಕೆ ರಾಜಕೀಯವಾಗಿ ಬಲತುಂಬಿದ ಶಿವಮೊಗ್ಗ ಜಿಲ್ಲೆ- ಈಶ್ವರಪ್ಪ ಮತ್ತು ಯಡಿಯೂರಪ್ಪನವರ ಸ್ವಂತ ಆಸ್ತಿಯಂತೆ ಹರಿದು ಹಂಚಲ್ಪಟ್ಟಿದೆ.

ಶಾಸಕರಾಗಿ, ಸಂಸದರಾಗಿ, ಪಕ್ಷದ ಮುಖ್ಯಸ್ಥರಾಗಿ, ವಿರೋಧ ಪಕ್ಷದ ನಾಯಕರಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಮೆರೆದ ಯಡಿಯೂರಪ್ಪನವರು, ತಮ್ಮನ್ನು ಬೆಳೆಸಿದ ಸಮುದಾಯಕ್ಕೂ, ನಾಡಿಗೂ ಕೊಟ್ಟ ಕೊಡುಗೆಗಿಂತ ಭಾರತೀಯ ಜನತಾ ಪಕ್ಷವನ್ನು ಬೆಳೆಸಿದ್ದೇ ಹೆಚ್ಚಾಗಿದೆ. ಆ ಹಾದಿಯಲ್ಲಿ ಯಡಿಯೂರಪ್ಪನವರು ಸವೆದದ್ದು ಮತ್ತು ಸವೆಸಿದ್ದು- ನಿಜಕ್ಕೂ ಅಧ್ಯಯನಯೋಗ್ಯವಾಗಿದೆ.

ಇಂತಹ ಸಂದರ್ಭದಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ, ಪೋಕ್ಸೋ ಆರೋಪಿಯಾಗಿರುವ ಬಿಎಸ್‌ವೈ ಮೆರೆಸುವ ಅಗತ್ಯವಾದರೂ ಏನು ಎಂದು ಕೆದಕಿದರೆ- ಅಲ್ಲಿ ಬಿಜೆಪಿಯ ದಿಲ್ಲಿ ನಾಯಕರ ರಾಜಕೀಯ ಲೆಕ್ಕಾಚಾರಗಳು, ಅಧಿಕಾರ ಹಿಡಿಯುವ ಆಟಗಳು ಕಾಣುತ್ತವೆ. ಪಶ್ಚಿಮ ಬಂಗಾಳವನ್ನು ಗೆದ್ದಿರುವ ಬಿಜೆಪಿ, ಈಗ ಕರ್ನಾಟಕದ ಮೇಲೆ ಕಣ್ಣು ನೆಟ್ಟಿರುವ ಅನುಮಾನಕ್ಕೆ ಕಾರಣವಾಗುತ್ತದೆ. ಆದರೆ, ಕರ್ನಾಟಕವನ್ನು ಗೆಲ್ಲಲಿಕ್ಕೆ ಮೋದಿ-ಅಮಿತ್ ಶಾಗಳ ಅಧಿಕಾರದಾಟವಷ್ಟೇ ಸಾಲದಾಗಿದೆ. ವಿಶೇಷವಾಗಿ, ಬಹುಸಂಖ್ಯಾತರಾದ ಲಿಂಗಾಯತ ಸಮುದಾಯವನ್ನು ಪಕ್ಷದತ್ತ ಸೆಳೆಯಬೇಕಾಗಿದೆ. ಈಗ ಇರುವ ರಾಜ್ಯ ಬಿಜೆಪಿ ನಾಯಕರಿಗೆ ಆ ಶಕ್ತಿ ಮತ್ತು ವರ್ಚಸ್ಸು ಇಲ್ಲವಾಗಿದೆ. ಹಾಗಾಗಿ ಸಕ್ರಿಯ ರಾಜಕಾರಣದಿಂದ ದೂರ ಉಳಿದಿರುವ ಯಡಿಯೂರಪ್ಪನವರು ಈಗ ಬಿಜೆಪಿಗೆ ಬೇಕಾಗಿದೆ. ಅಭಿಮಾನೋತ್ಸವ ನೆಪವಾಗಿದೆ. ಯಡಿಯೂರಪ್ಪನವರ ಹಿರಿತನ ಮತ್ತು ಜನಪ್ರಿಯತೆಯನ್ನು ಪಕ್ಷದ ಬಲವರ್ಧನೆಗೆ ಮತ್ತೊಮ್ಮೆ ಬಳಸಿಕೊಳ್ಳಲು ಬಿಜೆಪಿ ಹವಣಿಸುತ್ತಿದೆ.

ಸೋಜಿಗದ ಸಂಗತಿ ಎಂದರೆ, ಜನರ ನಡುವೆಯಿಂದ ಎದ್ದುಬಂದ ಯಡಿಯೂರಪ್ಪನವರು ಜನರನ್ನು ಬಳಸಿಕೊಂಡು ಮುಖ್ಯಮಂತ್ರಿಯಾದರು. ಯಡಿಯೂರಪ್ಪನವರನ್ನು ಬಳಸಿಕೊಂಡ ಬಿಜೆಪಿ ಕರ್ನಾಟಕದಲ್ಲಿ ಅಧಿಕಾರಕ್ಕೇರುವ ಮೂಲಕ ದಕ್ಷಿಣ ಭಾರತದಲ್ಲಿ ಖಾತೆ ತೆರೆಯಿತು. ಬೆಳೆಸಿದ ಕರ್ನಾಟಕದ ಜನತೆಯನ್ನು ಯಡಿಯೂರಪ್ಪನವರು ಮರೆತರು. ಅದೇ ರೀತಿ ಬಿಎಸ್‌ವೈ ಬಳಸಿಕೊಂಡು ಬೆಳೆದ ಬಿಜೆಪಿ, ಅವರನ್ನೇ ಮರೆಯಿತು. ಅಧಿಕಾರದಿಂದ ಕೆಳಗಿಳಿಸಿತು, ಸಾರ್ವಜನಿಕವಾಗಿ ಅವಮಾನಿಸಿತು. ಬಾಳೆ ಎಲೆಯಂತೆ ಬಳಸಿ ಬಿಸಾಡಿತು.

ಇಷ್ಟಾದರೂ, ಯಡಿಯೂರಪ್ಪನವರು ಮಕ್ಕಳ ಮೇಲಿನ ಮೋಹಕ್ಕಾಗಿ, ಅವರ ಭವಿಷ್ಯದ ರಾಜಕಾರಣಕ್ಕಾಗಿ, ಸ್ವಾರ್ಥಕ್ಕಾಗಿ ತಮ್ಮನ್ನು ಹೀನಾಯವಾಗಿ ನಡೆಸಿಕೊಂಡ ಸಂಘದ ಸಂತೋಷ್‌ರೊಂದಿಗೆ ಕೂತು ಊಟ ಮಾಡಿ, ಮಾತನಾಡಿದ್ದಾರೆ. ತಮ್ಮನ್ನು ಪೊರೆದ ಪೋಷಿಸಿದ ಜನರನ್ನು ಕೇವಲ ಮತದಾರರನ್ನಾಗಿ, ತಮ್ಮ ರಾಜಕೀಯ ಲಾಭಕ್ಕೆ ಬಳಕೆಯಾಗುವ ಕಾಲಾಳುಗಳನ್ನಾಗಿ, ತಮ್ಮ ಸಂಪತ್ತಿಗಾಗಿ ಶ್ರಮಿಸುವ ಕೂಲಿಗಳನ್ನಾಗಿ ಕಂಡಿದ್ದಾರೆ.

ಹೀಗಾಗಿ ಯಡಿಯೂರಪ್ಪನವರ ಅಭಿಮಾನೋತ್ಸವವನ್ನು ಕೇವಲ ಅಭಿಮಾನಿಗಳ ಸ್ವಯಂಸ್ಫೂರ್ತಿಯ ಸಂಭ್ರಮವೆಂದು ನೋಡುವುದಕ್ಕಿಂತ, ಒಡೆದು ಚೂರಾಗಿರುವ ರಾಜ್ಯ ಬಿಜೆಪಿಯನ್ನು ಒಂದುಗೂಡಿಸಲು, ಲಿಂಗಾಯತ ಸಮುದಾಯವನ್ನು ಬಿಜೆಪಿಯತ್ತ ಮತ್ತೊಮ್ಮೆ ಸೆಳೆಯಲು ಮತ್ತು 2028ರ ಚುನಾವಣೆಗೆ ಮುನ್ನುಡಿ ಬರೆಯಲು ಬಳಸುತ್ತಿರುವ ರಾಜಕೀಯ ವೇದಿಕೆಯಾಗಿ ನೋಡುವುದು ಹೆಚ್ಚು ಸಮಂಜಸವೆನಿಸುತ್ತದೆ.

ರಾಜೀನಾಮೆ ಕೊಡಲ್ಲ ; ಬಿಜೆಪಿಯ ಮತಾಧಿಕಾರ 'ಲೂಟಿ' ಆಟಕ್ಕೆದುರಾಗಿ ದೀದಿ ಬಂಡಾಯ!

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ 2026ರ ಫಲಿತಾಂಶಗಳು ರಾಜ್ಯದ ರಾಜಕೀಯ ಚಿತ್ರಣವನ್ನು ಪೂರ್ಣವಾಗಿ ಬದಲಾಯಿಸಿವೆ. ಅದನ್ನ ಬದಲಾಯಿಸುತ್ತಿರುವವರು ಬಂಗಾಳದ ಸಿಂಹಿಣಿ ಎಂತಲೇ ಹೆಸರುವಾಸಿಯಾದ ಮಮತಾ ಬ್ಯಾನರ್ಜಿ. ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಮಮತಾ ಬ್ಯಾನರ್ಜಿ ಎಂದರೆ ಕೇವಲ ಒಬ್ಬ ಮುಖ್ಯಮಂತ್ರಿಯಲ್ಲ, ಅದೊಂದು ಅಪ್ರತಿಮ ಹೋರಾಟದ ಸಂಕೇತ. ಪ್ರಸ್ತುತ ಚುನಾವಣಾ ಫಲಿತಾಂಶದ ನಂತರ ಅವರು ಕೈಗೊಂಡಿರುವ ನಿರ್ಧಾರಗಳು ರಾಷ್ಟ್ರಮಟ್ಟದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿವೆ. ''ನಾನು ಸೋತಿಲ್ಲ, ರಾಜೀನಾಮೆ ನೀಡಲ್ಲ'' ಎಂಬ ದೀದಿಯ ಗುಡುಗು ಬಿಜೆಪಿಯ ಚುನಾವಣಾ ತಂತ್ರಗಾರಿಕೆ ಮತ್ತು ಸಂಸ್ಥೆಗಳನ್ನು ಬಳಸಿಕೊಂಡು ಆಡಿರುವ ಆಟಕ್ಕೆ ಪ್ರತಿಭಟನೆಯಂತೆ ಭಾಸವಾಗುತ್ತಿದೆ. ಬಿಜೆಪಿ ಎಸ್‌ಐಆರ್ (, ,) ಹೆಸರಿನಲ್ಲಿ ನಡೆಸಿದ ಮತಾಧಿಕಾರ ಹರಣದ ರಾಜಕಾರಣಕ್ಕೆ ಮಮತಾ ಅವರು ಸಂವಿಧಾನದ ಚೌಕಟ್ಟಿನಲ್ಲೇ ಪ್ರತಿಭಟಿಸಲು ಮುಂದಾಗಿದ್ದಾರೆ..

ಜನಾದೇಶದ ಲೂಟಿ ಮತ್ತು ಮಮತಾ ಅವರ ಪ್ರತಿರೋಧ

ಚುನಾವಣಾ ಫಲಿತಾಂಶ ಬಂದ ನಂತರ ಮಮತಾ ಬ್ಯಾನರ್ಜಿ ಅವರು ಹೇಳಿದ ಒಂದು ಮಾತು ಅತ್ಯಂತ ಮಾರ್ಮಿಕವಾಗಿದೆ. ''ಇದು ಜನರು ನೀಡಿದ ತೀರ್ಪಲ್ಲ, ಇದು ಲೂಟಿಯ ಫಲಿತಾಂಶ''. ಬಿಜೆಪಿ ಸರ್ಕಾರವು ಕೇಂದ್ರದ ತನಿಖಾ ಸಂಸ್ಥೆಗಳು, ಚುನಾವಣಾ ಆಯೋಗ ಮತ್ತು ಇತರ ಸಾಂವಿಧಾನಿಕ ಸ್ವಾಯತ್ತ ಸಂಸ್ಥೆಗಳನ್ನು () ಬಳಸಿಕೊಂಡು ಬಂಗಾಳದ ಜನಾದೇಶವನ್ನು ಹತ್ತಿಕ್ಕಲು ಪ್ರಯತ್ನಿಸಿದೆ. ಈ ''ಲೂಟಿ''ಯ ವಿರುದ್ಧ ಧ್ವನಿ ಎತ್ತದಿದ್ದರೆ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ ಎಂಬುದು ಮಮತಾ ಬ್ಯಾನರ್ಜಿ ಅವರ ಆಕ್ರೋಶ. ಹೀಗಾಗಿಯೇ ಅವರು ರಾಜೀನಾಮೆ ನೀಡಲು ನಿರಾಕರಿಸಿದ್ದಾರೆ. ತಮ್ಮ ನಿರ್ಗಮನದ ಮೇಲೆಯೂ ಪ್ರತಿಭಟನೆ- ಬಂಡಾಯದ ಮೊಹರು ಒತ್ತುವ ಜನನಾಯಕಿಯ ತಂತ್ರಗಾರಿಕೆಯಿದು. ಮುಖ್ಯ ಚುನಾವಣಾಧಿಕಾರಿ ಗ್ಯಾನೇಶ್ ಕುಮಾರ್ ಮೂಲಕ ಬಿಜೆಪಿ ನಡೆಸಿದ ಮಹಾ ಮತಾಧಿಕಾರ ಹರಣ ಮತ್ತು ಅದರ ಪರಿಣಾಮವಾಗಿ ತಮಗೆ ಉಂಟಾಗಿರುವ ಸೋಲಿನ ಕುರಿತು ಬಂಗಾಳದ ಹೊರಗೆ ಮತ್ತು ಒಳಗೆ ಜನಸಾಮಾನ್ಯರ ಗಮನ ಸೆಳೆಯುವುದು ಆಕೆಯ ಉದ್ದೇಶ. ಅಪ್ಪಟ ಅನ್ಯಾಯದ ವಿರುದ್ಧ ಬಾಯಿ ಹೊಲಿದುಕೊಂಡು ನಿರ್ಗಮಿಸುವ ಜಾಯಮಾನ ತಮ್ಮದಲ್ಲ ಎಂದು ಗರ್ಜಿಸಿ ಹೇಳುವ ರಾಜಕೀಯ ನಡೆಯಿದು. ಫಲಿತಾಂಶಗಳು ಹೊರಬಿದ್ದ ನಂತರವೂ ಮುಖ್ಯಮಂತ್ರಿ ಕುರ್ಚಿಗೆ ಅಂಟಿಕೊಂಡೇ ಇರುವ ಇರಾದೆ ದೀದಿಗೆ ಇಲ್ಲ. ಮುಂದಿನ ದಿನಗಳನ್ನು ಇಂಡಿಯಾ ಒಕ್ಕೂಟವನ್ನು ಬಲಪಡಿಸಲು ಮೀಸಲಿರಿಸುವುದಾಗಿ ಈಗಾಗಲೆ ಸಾರಿದ್ದಾರೆ. ಅದರ ಅರ್ಥ ಮುಖ್ಯಮಂತ್ರಿ ಹುದ್ದೆಗೆ ಜಿಗಣೆಯಂತೆ ಅಂಟಿಕೊಳ್ಳುವುದಲ್ಲ, ಬದಲಿಗೆ ತಮ್ಮ ಪ್ರತಿಭಟನೆಯನ್ನು ದಾಖಲಿಸಿ ನಿರ್ಗಮಿಸುವುದೇ ಆಗಿದೆ.

ಭಾರತದ ಸಂವಿಧಾನವು ರಾಜ್ಯದ ಆಡಳಿತ ಮತ್ತು ಮುಖ್ಯಮಂತ್ರಿಯ ಅಧಿಕಾರಾವಧಿಯ ಬಗ್ಗೆ ಸ್ಪಷ್ಟವಾದ ನಿಯಮಗಳನ್ನು ಹೊಂದಿದೆ.

ಅನುಚ್ಛೇದ 164: ಈ ವಿಧಿಯ ಪ್ರಕಾರ, ಮುಖ್ಯಮಂತ್ರಿಯನ್ನು ರಾಜ್ಯಪಾಲರು ನೇಮಿಸುತ್ತಾರೆ ಮತ್ತು ಇತರ ಸಚಿವರನ್ನು ಮುಖ್ಯಮಂತ್ರಿಯ ಸಲಹೆಯ ಮೇರೆಗೆ ನೇಮಿಸಲಾಗುತ್ತದೆ. ಮುಖ್ಯಮಂತ್ರಿಯು ರಾಜ್ಯಪಾಲರ ''ಮರ್ಜಿ'' () ಇರುವವರೆಗೆ ಅಧಿಕಾರದಲ್ಲಿರುತ್ತಾರೆ. ಆದರೆ, ಈ ಮರ್ಜಿ ಎನ್ನುವುದು ವಿಧಾನಸಭೆಯ ಬಹುಮತಕ್ಕೆ ಅನ್ವಯಿಸುತ್ತದೆ.

ಅಧಿಕಾರಾವಧಿ ಮುಕ್ತಾಯ: ವಿಧಾನಸಭೆಯ ಅವಧಿ ಮುಗಿದಾಗ (ಇಲ್ಲಿ ಮೇ 7), ತಾಂತ್ರಿಕವಾಗಿ ಸರ್ಕಾರವು ಅಸ್ತಿತ್ವ ಕಳೆದುಕೊಳ್ಳುತ್ತದೆ. ಸಾಮಾನ್ಯವಾಗಿ, ಹೊಸ ಸರ್ಕಾರ ರಚನೆಯಾಗುವವರೆಗೆ ಉಸ್ತುವಾರಿ () ಮುಖ್ಯಮಂತ್ರಿಯಾಗಿ ಮುಂದುವರಿಯುವಂತೆ ರಾಜ್ಯಪಾಲರು ಸೂಚಿಸುತ್ತಾರೆ. ಆದರೆ, ಮುಖ್ಯಮಂತ್ರಿಯು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡುವುದು ಒಂದು ಸಂಸದೀಯ ಸತ್ಸಂಪ್ರದಾಯ.



ವಜಾ ಮಾಡುವ ಅಧಿಕಾರ: ವಿಧಾನಸಭೆಯ ಅವಧಿ ಮುಗಿದ ಮೇಲೆಯೂ ಮುಖ್ಯಮಂತ್ರಿ ರಾಜೀನಾಮೆ ನೀಡದಿದ್ದರೆ, ರಾಜ್ಯಪಾಲರು ಮಂತ್ರಿಮಂಡಲವನ್ನು ವಜಾ ಮಾಡಬಹುದು. ಪ್ರಜಾಪ್ರಭುತ್ವದಲ್ಲಿ ಬಹುಮತ ಕಳೆದುಕೊಂಡ ಅಥವಾ ಅವಧಿ ಮುಗಿದ ಸರ್ಕಾರಕ್ಕೆ ಅಧಿಕಾರದಲ್ಲಿರುವ ಹಕ್ಕಿರುವುದಿಲ್ಲ.

ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು: ರಾಜ್ಯದಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿದೆ ಎಂದು ರಾಜ್ಯಪಾಲರು ಭಾವಿಸಿದರೆ, ಸಂವಿಧಾನದ ಅನುಚ್ಛೇದ 356 ರ ಅಡಿಯಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲು ಶಿಫಾರಸು ಮಾಡಬಹುದು.

ಪಶ್ಚಿಮ ಬಂಗಾಳದಲ್ಲಿ ಪ್ರಸ್ತುತ ಸನ್ನಿವೇಶವು ರಾಷ್ಟ್ರಪತಿ ಆಳ್ವಿಕೆಯತ್ತ ಸಾಗುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಮಮತಾ ಬ್ಯಾನರ್ಜಿ ಅವರು ವಜಾ ಮಾಡಿಸಿಕೊಳ್ಳಲು ಕಾಯುತ್ತಿದ್ದಾರೆ ಎನ್ನುವುದು ನಿಜವಾದರೆ, ಅದು ''ಸಾಂವಿಧಾನಿಕ ಬಿಕ್ಕಟ್ಟು'' ( ) ಎಂಬ ಹಣೆಪಟ್ಟಿಯನ್ನು ಸೃಷ್ಟಿಸುತ್ತದೆ.

ಬಿಜೆಪಿಯ ಆಟಕ್ಕೆ ಮಮತಾ ಸಿದ್ಧಪಡಿಸಿದ ಪಾಠ

ಬಿಜೆಪಿಯು ಸತತವಾಗಿ ಮಮತಾ ಬ್ಯಾನರ್ಜಿ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಎಲ್ಲಾ ರೀತಿಯ ಕಸರತ್ತುಗಳನ್ನು ನಡೆಸುತ್ತಾ ಬಂದಿದೆ. ಹಣಬಲ ಮತ್ತು ತೋಳ್ಬಲದ ಮೂಲಕ ಚುನಾವಣೆ ಗೆಲ್ಲುವ ತಂತ್ರಕ್ಕೆ ಮಮತಾ ಅವರು ಈಗ ''ನೈತಿಕತೆಯ'' ಅಸ್ತ್ರದ ಮೂಲಕ ತಿರುಗೇಟು ನೀಡುತ್ತಿದ್ದಾರೆ.

ವ್ಯವಸ್ಥಿತ ಹೋರಾಟ: ಬಿಜೆಪಿಯು ವ್ಯವಸ್ಥೆಯನ್ನು () ಬಳಸಿಕೊಂಡು ತಮ್ಮನ್ನು ಸೋಲಿಸಲು ಯತ್ನಿಸಿದೆ ಹಾಗಾಗಿ, ತಾವಾಗಿ ರಾಜೀನಾಮೆ ನೀಡದೆ, ಮೋದಿ ಅಮಿತ್ ಶಾ ತಮ್ಮನ್ನು ಕಿತ್ತು ಹಾಕುವ ಅನಿವಾರ್ಯ ಸ್ಥಿತಿಯನ್ನು ಬೇಕೆಂದೇ ಆಹ್ವಾನಿಸುತ್ತಿದ್ದಾರೆ. ಬಿಜೆಪಿಯು ದೇಶದ ಸಾಂವಿಧಾನಿಕ ಸಂಸ್ಥೆಗಳನ್ನು ಒಳಗಿನಿಂದಲೇ ದುರ್ಬಲಗೊಳಿಸುತ್ತಿದೆ ಎಂಬ ಆರೋಪದ ನಡುವೆ, ಮಮತಾ ಅವರು ರಾಜ್ಯಪಾಲರ ಹಂತದಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಸುವ ಮೂಲಕ ಕೇಂದ್ರ ಸರ್ಕಾರವನ್ನು ತಮ್ಮನ್ನು ಕಿತ್ತು ಹಾಕುವ ಅನಿವಾರ್ಯಕ್ಕೆ ಸಿಲುಕಿಸುತ್ತಿದ್ದಾರೆ.

ಮಮತಾ ಬ್ಯಾನರ್ಜಿ ಅವರು ವಜಾ ಮಾಡಿಸಿಕೊಳ್ಳಲು ಕಾಯುತ್ತಿದ್ದಾರೆ ಎಂಬ ಚರ್ಚೆಗಳು ನಡೆಯುತ್ತಿವೆ. ಇದರ ಹಿಂದೆ ಬಲವಾದ ತರ್ಕವಿದೆ. ಒಂದು ವೇಳೆ ಕೇಂದ್ರ ಸರ್ಕಾರವು ಅಥವಾ ರಾಜ್ಯಪಾಲರು ಅವರನ್ನು ಪದಚ್ಯುತಗೊಳಿಸಿದರೆ, ಅದು ಬಂಗಾಳದ ಅಸ್ಮಿತೆಯ ಮೇಲೆ ನಡೆದ ದಾಳಿ ಎಂದು ಮಮತಾ ಬಿಂಬಿಸಲಿದ್ದಾರೆ. ಇದು ಬಂಗಾಳದ ಜನರಲ್ಲಿ ಬಿಜೆಪಿ ವಿರೋಧದ ಭಾವನೆ ಮೂಡಿಸಲು ಸಹಕಾರಿಯಾಗಲಿದೆ. ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಲು ತಾವು ಈ ಹಠಕ್ಕೆ ಬಿದ್ದಿರುವುದಾಗಿ ಅವರು ತೋರಿಸುತ್ತಿದ್ದಾರೆ. ಬಿಜೆಪಿಯ ''ಆಪರೇಷನ್ ಕಮಲ'' ಅಥವಾ ಸಂಸ್ಥೆಗಳ ದುರ್ಬಳಕೆಯ ಕುರಿತು ಜನತೆಯ ಗಮನ ಸೆಳೆಯಲು ಪ್ರಯತ್ನಿಸಿದ್ದಾರೆ.

ಬಂಗಾಳದ ವಿಧಾನಸಭೆಯ ಹಾಲಿ ಅವಧಿ ಮೇ 7ಕ್ಕೆ ಮುಕ್ತಾಯವಾಗಬಹುದು. ಆದರೆ, ಫಲಿತಾಂಶದಲ್ಲಿ ಅಕ್ರಮ ನಡೆದಿದೆ ಎಂಬ ಸಂದೇಹವಿರುವಾಗ ಮತ್ತು ಜನಾದೇಶವನ್ನೇ ತಿರುಚಲಾಗಿದೆ ಎಂಬ ಗಂಭೀರ ಆರೋಪವಿರುವಾಗ, ಕೇವಲ ತಾಂತ್ರಿಕ ಕಾರಣಕ್ಕೆ ರಾಜೀನಾಮೆ ನೀಡುವುದು ಜನರಿಗೆ ಮಾಡುವ ದ್ರೋಹ ಎಂಬುದು ಮಮತಾ ಅವರ ನಿಲುವು. ಬಿಜೆಪಿಯು ಸಾಂವಿಧಾನಿಕ ಸಂಸ್ಥೆಗಳನ್ನು () ತನ್ನ ಲಾಭಕ್ಕೆ ಬಳಸಿಕೊಳ್ಳುತ್ತಿರುವಾಗ, ಅದೇ ಸಂವಿಧಾನದ ಅಡಿಯಲ್ಲಿ ರಾಜ್ಯಪಾಲರು ತೆಗೆದುಕೊಳ್ಳುವ ಪ್ರತಿಯೊಂದು ಕ್ರಮವನ್ನೂ ಪ್ರಶ್ನಿಸಲು ಅವರು ಸಿದ್ದರಾಗಿದ್ದಾರೆ. ಇದು ಕೇವಲ ಅಧಿಕಾರಕ್ಕಾಗಿ ನಡೆಸುತ್ತಿರುವ ಹಠವಲ್ಲ, ಬದಲಾಗಿ ಕೇಂದ್ರದ ಅಧಿಪತ್ಯದ ವಿರುದ್ಧ ರಾಜ್ಯವೊಂದರ ಧರ್ಮಯುದ್ಧದ ಕಡೆಯ ಹಂತದಂತೆ ಕಾಣುತ್ತಿದೆ.

ಒಂದು ವೇಳೆ ಈ ಸಂಘರ್ಷದ ಅಂತ್ಯವಾಗಿ ಕೇಂದ್ರವು ರಾಷ್ಟ್ರಪತಿ ಆಳ್ವಿಕೆ ಹೇರಿದರೆ, ಮಮತಾ ಬ್ಯಾನರ್ಜಿ ಅವರಿಗೆ ಅದು ದೊಡ್ಡ ರಾಜಕೀಯ ಅಸ್ತ್ರವಾಗಲಿದೆ. ''ಬಂಗಾಳದ ಹೆಣ್ಣುಮಗಳ ಮೇಲೆ ಕೇಂದ್ರದ ದಬ್ಬಾಳಿಕೆ'' ಎಂಬ ಅಭಿಯಾನವನ್ನು ಅವರು ಬೀದಿಗಿಳಿದು ನಡೆಸಬಹುದು. ಬಿಜೆಪಿಯ ಆಟಕ್ಕೆ ಬಂಗಾಳದ ಮಣ್ಣಿನಲ್ಲಿ ಪಾಠ ಕಲಿಸುವುದು ಹೇಗೆ ಎಂಬುದು ಮಮತಾ ಅವರಿಗೆ ಚೆನ್ನಾಗಿ ತಿಳಿದಿದೆ.

ಆದರೆ, ಈ ರಾಜಕೀಯ ಸಂಘರ್ಷದ ನಡುವೆಯೂ ಪಶ್ಚಿಮ ಬಂಗಾಳದ ವಾಸ್ತವ ಸ್ಥಿತಿಯ ಮತ್ತೊಂದು ಮುಖವನ್ನು ಕಡೆಗಣಿಸುವಂತಿಲ್ಲ. ಮಮತಾ ಬ್ಯಾನರ್ಜಿ ಅವರ ಆಡಳಿತದ ವಿರುದ್ಧ ಜನಸಾಮಾನ್ಯರಲ್ಲಿ ಆಡಳಿತ ವಿರೋಧಿ ಅಲೆ (-) ಎದ್ದಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ತೃಣಮೂಲ ಕಾಂಗ್ರೆಸ್‌ನ () ಕೆಳಹಂತದ ಕಾರ್ಯಕರ್ತರು ಮತ್ತು ಸ್ಥಳೀಯ ನಾಯಕರು ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿರುವುದು, ಸಾಮಾನ್ಯ ಜನರ ಮೇಲೆ ದಬ್ಬಾಳಿಕೆ ನಡೆಸುವುದು ಮತ್ತು ರಾಜಕೀಯ ದಾದಾಗಿರಿಯ ಬಂಗಾಳಿಗರಲ್ಲಿ ಅಸಮಾಧಾನ ಉಂಟು ಮಾಡಿದ್ದು ಹೌದುಈ ಎಲ್ಲ ಅಸಮಾಧಾನಗಳ ನಡುವೆಯೂ ದೀದಿ ಬಿಜೆಪಿಗೆ ಕಠಿಣ ಫೈಟ್ ಕೊಟ್ಟಿದ್ದರು. ಅವರನ್ನು ಮಣಿಸಲು ಬಿಜೆಪಿ ಏಕಕಾಲಕ್ಕೆ ಹಲವು ಅಸ್ತ್ರಗಳನ್ನು ಪ್ರಯೋಗಿಸಬೇಕಾಯಿತು. ಅವುಗಳ ಪೈಕಿ 90 ಲಕ್ಷ ಬಂಗಾಳಿಗರ ಮತಾಧಿಕಾರದ ಹತ್ಯೆ. ಈ ರಕ್ತರಹಿತ ನರಮೇಧ ನಡೆದದ್ದು ಬಿಜೆಪಿಯ ಗೆಲುವಿನ ಮೇಲೆ ದೊಡ್ಡ ಕಳಂಕವನ್ನು ಇರಿಸಿದೆ.

ಮಮತಾ ಬ್ಯಾನರ್ಜಿ ಅವರು ಇಂದು ತೆಗೆದುಕೊಳ್ಳುತ್ತಿರುವ ನಿರ್ಧಾರಗಳು ಪ್ರಜಾಪ್ರಭುತ್ವದಲ್ಲಿ ಒಂದು ಹೊಸ ಮಾದರಿಯ ಪ್ರತಿರೋಧವನ್ನು ಸೃಷ್ಟಿಸಿವೆ. ಅದರ ಹಲವು ಝಲಕ್ ಗಳನ್ನು ಅವರು ಕಳೆದ 15 ವರ್ಷಗಳ ತಮ್ಮ ಆಡಳಿತದಲ್ಲಿ ತೋರಿದ್ದಾರೆ. ಬಿಜೆಪಿಯ ಮಹಾನ್ ಕುತಂತ್ರ ಎಂದೇ ಬಣ್ಣಿಸಲಾದ 90 ಲಕ್ಷ ಮಂದಿಯ ಮತಾಧಿಕಾರ ಹರಣದ ವಿರುದ್ಧ ಸುಪ್ರೀಮ್ ಕೋರ್ಟ್ ಮೆಟ್ಟಿಲೇರಿದ್ದರು. ಖುದ್ದು ತಾವೇ ನ್ಯಾಯಪೀಠದ ಮುಂದೆ ಪ್ರಬಲವಾದ ಮಂಡಿಸಿ ನ್ಯಾಯಕ್ಕಾಗಿ ಮೊರೆಯಿಟ್ಟ ಪರಿಯನ್ನು ದೇಶ ಈಗಾಗಲೇ ನೋಡಿದೆ. ಬಿಜೆಪಿಯ ರಾಜಕೀಯ ತಂತ್ರಗಳಿಗೆ ಮಣಿಯದೆ, ಮುಖಾಮುಖಿಯಾಗಿ ನಿಂತು ಸವಾಲು ಹಾಕುವ ಅವರ ಧೈರ್ಯ ಮೆಚ್ಚುವಂತದ್ದು. ಅಧಿಕಾರಕ್ಕಿಂತಲೂ ಹೆಚ್ಚಾಗಿ ''ಜನಾದೇಶದ ಪವಿತ್ರತೆ'' ಮುಖ್ಯ ಎಂದು ಅವರು ವಾದಿಸುತ್ತಿದ್ದಾರೆ. ಬಿಜೆಪಿಯು ಸಂಸ್ಥೆಗಳನ್ನು ಬಳಸಿಕೊಂಡು ಆಡಿದ ಆಟಕ್ಕೆ, ಮಮತಾ ಪ್ರತ್ಯುತ್ತರ ನೀಡಿಯೇ ನಿರ್ಗಮಿಸುವ ನಿಚ್ಚಳ ಸೂಚನೆ ತೋರಿದ್ದಾರೆ.

ಬಂಗಾಳದಲ್ಲಿ ಎರಡೂವರೆ ಲಕ್ಷ ಅರೆಸೇನಾ ಪಡೆಗಳಿದ್ದೂ ಹಿಂಸಾಚಾರ ಭುಗಿಲೆದ್ದರೆ ಅದರ ಜವಾಬ್ದಾರಿ ಹೊರುವವರು ಯಾರು?

ಪಶ್ಚಿಮ ಬಂಗಾಳದಲ್ಲಿ ಭುಗಿಲೆದ್ದ ಚುನಾವಣಾ ನಂತರದ ಹಿಂಸಾಚಾರ, ಸಾವು-ನೋವುಗಳ ನೇರ ಜವಾಬ್ದಾರಿಯನ್ನು ಕೇಂದ್ರ ಚುನಾವಣಾ ಆಯೋಗದ ಮುಖ್ಯಸ್ಥ ಗ್ಯಾನೇಶ್ ಕುಮಾರ್ ಮತ್ತು ದೇಶದ ಗೃಹಮಂತ್ರಿ ಅಮಿತ್ ಶಾ ಅವರೇ ಹೊರಬೇಕು. ನಿರ್ಭೀತವಾಗಿ ಮತ ಚಲಾಯಿಸಿರಿ, ಮತದಾನದ ನಂತರ 15 ದಿನಗಳ ಕಾಲ ಅರೆಸೇನಾ ಪಡೆ ಬಂಗಾಳದಲ್ಲೇ ಮುಂದುವರೆಯಲಿದೆ ಎಂದು ಅಮಿತ್ ಶಾ ಅಭಯ ನೀಡಿದ್ದರು. ಎರಡೂವರೆ ಲಕ್ಷದಷ್ಟು ಅರೆಸೇನಾ ಪಡೆಯ ಅಪಾರ ಸಂಖ್ಯೆಯನ್ನು ಇಟ್ಟುಕೊಂಡೂ ಹಿಂಸಾಚಾರವನ್ನು ನಿಯಂತ್ರಿಸಲು ಅಸಾಧ್ಯವಾಯಿತು ಎಂದರೆ ಅದು ಒಂದೋ ಅಮಿತ್ ಶಾ ಮತ್ತು ಗ್ಯಾನೇಶ್ ಕುಮಾರ್ ಅಸಾಮರ್ಥ್ಯವನ್ನು ತೋರುತ್ತದೆ. ಇಲ್ಲವೇ ಟಿಎಂಸಿ ವಿರುದ್ಧ ಬಿಜೆಪಿಯ ಕಾರ್ಯಕರ್ತ ಪಡೆ ಹೊಂದಿದ್ದ ಹಗೆಯನ್ನು ತೀರಿಸಿಕೊಳ್ಳಲು ಬೇಕೆಂದೇ ನೀಡಿದ ಅವಕಾಶ ಎಂದು ಭಾವಿಸಬೇಕಾಗುತ್ತದೆ.

ಪಶ್ಚಿಮ ಬಂಗಾಳದ 2026ರ ವಿಧಾನಸಭಾ ಚುನಾವಣೆಯು ಪ್ರಜಾಪ್ರಭುತ್ವದ ಹಬ್ಬವಾಗುವ ಬದಲು, ಆತಂಕ ಮತ್ತು ಹಿಂಸಾಚಾರದ ಕಣವಾಗಿ ಮಾರ್ಪಟ್ಟಿದೆ. ಚುನಾವಣೆಗೂ ಮುನ್ನ ಹಾಗೂ ಮೇ 4ರಂದು ಫಲಿತಾಂಶ ಪ್ರಕಟವಾದ ನಂತರವೂ ರಾಜ್ಯದಲ್ಲಿ ನಡೆಯುತ್ತಿರುವ ಸರಣಿ ಗಲಭೆಗಳು, ಸಾಂವಿಧಾನಿಕ ಸಂಸ್ಥೆಗಳ ಕಾರ್ಯವೈಖರಿಯನ್ನು ತೀವ್ರವಾಗಿ ಪ್ರಶ್ನಿಸುವಂತೆ ಮಾಡಿವೆ. ರಾಜ್ಯದಲ್ಲಿ 2 ಲಕ್ಷಕ್ಕೂ ಅಧಿಕ ಸಿಆರ್‌ಪಿಎಫ್ ಹಾಗೂ ಇತರ ಕೇಂದ್ರೀಯ ಯೋಧರಿದ್ದರೂ ಹಿಂಸಾಚಾರ ಮುಂದುವರಿಕೆ ಆತಂಕಕಾರಿ.

ಚುನಾವಣಾ ಪೂರ್ವದ ಹಿಂಸಾಚಾರದ ಜೊತೆಗೆ ಮೇ 4ರಂದು ಫಲಿತಾಂಶ ಹೊರಬಿದ್ದ ಬೆನ್ನಲ್ಲೇ, ಹಿಂಸಾಚಾರ ಮತ್ತಷ್ಟು ಭೀಕರ ಸ್ವರೂಪ ಪಡೆದುಕೊಂಡಿದೆ. ಹೊಸ ಸರ್ಕಾರ ಇನ್ನೂ ಅಧಿಕೃತವಾಗಿ ಅಸ್ತಿತ್ವಕ್ಕೆ ಬಾರದ ಕಾರಣ, ಪ್ರಸ್ತುತ ರಾಜ್ಯದ ಸಂಪೂರ್ಣ ಕಾನೂನು ಮತ್ತು ಸುವ್ಯವಸ್ಥೆ ನೇರವಾಗಿ ಚುನಾವಣಾ ಆಯೋಗದ ಸುಪರ್ದಿಯಲ್ಲೇ ಇದೆ. ಆದರೆ, ಚುನಾವಣೆಗೂ ಮುನ್ನ ಸಣ್ಣಪುಟ್ಟ ಘಟನೆಗಳಿಗೂ ಕಠಿಣವಾಗಿ ಪ್ರತಿಕ್ರಿಯಿಸುತ್ತಿದ್ದ ಸಿಇಸಿ, ಈಗ ಇಷ್ಟೊಂದು ದೊಡ್ಡ ಮಟ್ಟದ ಹಲ್ಲೆ, ಬೆಂಕಿ ಹಚ್ಚುವ ಕೃತ್ಯಗಳು ನಡೆಯುತ್ತಿದ್ದರೂ ಸಂಪೂರ್ಣ ಮೌನಕ್ಕೆ ಶರಣಾಗಿರುವುದು ಅಚ್ಚರಿ ಮೂಡಿಸಿದೆ.



ಚುನಾವಣೆಗೂ ಪೂರ್ವದಲ್ಲೇ ಆಯೋಗದ ಹಲವು ನಡೆಗಳು ವಿವಾದಕ್ಕೆ ಗ್ರಾಸವಾಗಿದ್ದವು. ರಾಜ್ಯ ಪೊಲೀಸ್ ವ್ಯವಸ್ಥೆ ಮತ್ತು ಸ್ಥಳೀಯ ಆಡಳಿತವನ್ನು ಸಂಪೂರ್ಣವಾಗಿ ಬದಿಗೊತ್ತಿ, ಕೇವಲ ಕೇಂದ್ರೀಯ ವೀಕ್ಷಕರ ವರದಿಗಳ ಆಧಾರದ ಮೇಲೆ(ಕೇಂದ್ರ ಸರ್ಕಾರದ ಅಣತಿಯಂತೆ) ಸಿಇಸಿ ಏಕಪಕ್ಷೀಯ ಆದೇಶಗಳನ್ನು ಹೊರಡಿಸುತ್ತಿತ್ತು. ವಾಸ್ತವಿಕ ನೆಲೆಗಟ್ಟನ್ನು ಅರಿಯದೆ, ಏಕಾಏಕಿ ನೂರಾರು ಉನ್ನತ ಅಧಿಕಾರಿಗಳ ವರ್ಗಾವಣೆ ಹಾಗೂ ಹಿಂದೆ ಗಲಭೆಗಳಲ್ಲಿ ಭಾಗಿಯಾಗಿದ್ದವರನ್ನು ಮುಂಜಾಗ್ರತೆಯಾಗಿ ಬಂಧಿಸಿ ಎಂಬ ಪೂರ್ವಗ್ರಹದ ಸೂಚನೆಗಳು ಆಡಳಿತ ಯಂತ್ರದಲ್ಲಿ ತೀವ್ರ ಗೊಂದಲ ಸೃಷ್ಟಿಸಿದವು. ಸಮರ್ಪಕ ಸಮನ್ವಯವಿಲ್ಲದೆ ಕೈಗೊಂಡ ಇಂತಹ ದಿಢೀರ್ ಕ್ರಮಗಳು ಚುನಾವಣಾ ಪೂರ್ವ ಹಿಂಸಾಚಾರವನ್ನು ಸೆರಗಿಗೆ ಕಟ್ಟಿಕೊಂಡವು.

ಸ್ಥಳೀಯ ಗುಪ್ತಚರ ವರದಿಗಳನ್ನು ಕಡೆಗಣಿಸಿ, ಕೇವಲ ಭದ್ರತಾ ಪಡೆಗಳ ನಿಯೋಜನೆಯೊಂದೇ ಎಲ್ಲದಕ್ಕೂ ಪರಿಹಾರ ಎಂಬಂತೆ ಆಯೋಗ ವರ್ತಿಸಿದ್ದು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿತು. ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕಾದ ಆಯೋಗವು, ಆಜ್ಞೆಗಳನ್ನು ಮಾತ್ರ ನೀಡುವ ಸರ್ವಾಧಿಕಾರಿಯಂತೆ ವರ್ತಿಸಿತು. ಕೇಂದ್ರ ಪಡೆಗಳ ನಿಯೋಜನೆ ಮತ್ತು ನಿರ್ವಹಣೆಯಲ್ಲಿ ರಾಜ್ಯದ ಅಧಿಕಾರಿಗಳಿಗೆ ಯಾವುದೇ ಪಾತ್ರವಿಲ್ಲದಂತೆ ಮಾಡಿದ್ದು, ಭದ್ರತಾ ಲೋಪಕ್ಕೆ ಪ್ರಮುಖ ಕಾರಣವಾಯಿತು.

ಇಂದು ರಾಜ್ಯದಲ್ಲಿ ಎರಡೂವರೆ ಲಕ್ಷದಷ್ಟು ಅರೆಸೇನಾ ಪಡೆಗಳ ಪಹರೆಯಿದೆ. ಭಾರತದ ಚುನಾವಣಾ ಇತಿಹಾಸದಲ್ಲೇ ಅರೆಸೇನಾ ಪಡೆಗಳ ಅತಿ ದೊಡ್ಡ ನಿಯೋಜನೆಯಿಂದು. ಶತ್ರುಸೀಮೆಯೊಂದಕ್ಕೆ ಲಗ್ಗೆ ಹಾಕಿದ ಪರಿಯಲ್ಲಿ ಬಂಗಾಳಕ್ಕೆ ಲಗ್ಗೆ ಹಾಕಿಸಲಾಯಿತು. ಫಲಿತಾಂಶದ ನಂತರ ಬಹುತೇಕ ಪಡೆಗಳನ್ನು ಉಳಿಸಿಕೊಳ್ಳಲಾಗಿತ್ತು. ಆದರೂ, ರಾಜಕೀಯ ಕಾರ್ಯಕರ್ತರ ಮೇಲಿನ ಮಾರಣಾಂತಿಕ ಹಲ್ಲೆಗಳು ರಾಜಾರೋಷವಾಗಿ ನಡೆಯುತ್ತಲೇ ಇವೆ. ಹತ್ಯೆಗಳು ಕೂಡ ಆಬಾಧಿತ. ರಕ್ಷಣೆ ನೀಡಬೇಕಾದ ಪಡೆಗಳು ಕೇವಲ ಮೂಕ ಪ್ರೇಕ್ಷಕರಂತೆ ನಿಂತಿರುವುದು, ಆಡಳಿತ ಯಂತ್ರವು ಈ ಹಿಂಸಾಚಾರವನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುತ್ತಿದೆಯೇ ಎಂಬ ಸಂಶಯವನ್ನು ಹುಟ್ಟುಹಾಕಿದೆ.

ಆಯೋಗದ ಈ ನಿಷ್ಕ್ರಿಯತೆಯ ಹಿಂದೆ ಕೇಂದ್ರ ಸರ್ಕಾರದ ಪರೋಕ್ಷ ಬೆಂಬಲವಿದೆ ಎಂಬ ವಿಪಕ್ಷಗಳ ಆರೋಪಗಳನ್ನು ತಳ್ಳಿಹಾಕುವಂತಿಲ್ಲ. ಚುನಾವಣೆಯಲ್ಲಿ ತಮ್ಮ ಪರವಾದ ವಾತಾವರಣ ನಿರ್ಮಿಸಲು ಕಠಿಣ ನಿಯಮಗಳನ್ನು ಜಾರಿಗೆ ತಂದಿದ್ದ ವ್ಯವಸ್ಥೆ, ಇದೀಗ ಫಲಿತಾಂಶದ ನಂತರ ಉದ್ದೇಶಪೂರ್ವಕವಾಗಿಯೇ ರಾಜ್ಯವನ್ನು ಪ್ರತೀಕಾರ ತೀರಿಸುವ ಹಿಂಸಾಚಾರಕ್ಕೆ ಅವಕಾಶ ನೀಡಲಾಗಿದೆಯೇ ಎಂಬ ಅನುಮಾನಗಳು ದಟ್ಟವಾಗಿವೆ. ಸಾಂವಿಧಾನಿಕ ಸಂಸ್ಥೆಯೊಂದು ಆಡಳಿತಾರೂಢರ ಕೈಯಲ್ಲಿನ ರಾಜಕೀಯ ದಾಳವಾಗಿ ಬಳಕೆಯಾಗುತ್ತಲಿರುವುದು ಪ್ರಜಾಪ್ರಭುತ್ವದ ಅಣಕವಾಗಿದೆ.

ಚುನಾವಣಾ ಪ್ರಕ್ರಿಯೆಯನ್ನು ಶಾಂತಿಯುತವಾಗಿ ಮುಕ್ತಾಯಗೊಳಿಸುವ ಜವಾಬ್ದಾರಿ ಹೊತ್ತಿದ್ದ ಆಯೋಗ, ಮತಎಣಿಕೆಯ ತನಕ ಶಾಂತಿ ಕಾಪಾಡಿದ್ದೂ, ಆನಂತರ ನಿಯಂತ್ರಣ ತಪ್ಪಿದ್ದು ಕಾಕತಾಳೀಯ ಎಂದು ನಂಬುವುದು ಕಷ್ಟ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR